
ಕೊರವಂಜಿ



Koravanji

ಜನವರಿ

೧೯೫೫

★

ಸಂಪಾದಕರು:

ಶ್ರೀ॥ ರಾ. ಶಿ.

ಬರಹಗಾರರು:

ಶ್ರೀ॥ ಬಚ್ಚ
ಶ್ರೀ॥ ಪಂಡಿತ
ಶ್ರೀ॥ ಹಾ. ರಾ.
ಶ್ರೀ॥ "ಕೇಫ"
ಶ್ರೀ॥ ಅ. ರಾ. ಸೇ.
ಶ್ರೀ॥ ರಾಮಕೃಷ್ಣ
ಶ್ರೀ॥ ಶಿವು
ಶ್ರೀ॥ ನಾ. ಕ.
ಶ್ರೀ॥ ಪಾಪಿ
ಶ್ರೀ॥ ಯಜ್ಞಪಶು
ಶ್ರೀ॥ ರೇವಣ್ಣ
ಶ್ರೀ॥ ಅಳ್ಳೀಗನೂರ
ಶ್ರೀ॥ ಕುಮಾರ್

ಇತ್ಯಾದಿ, ಇತ್ಯಾದಿ.

ತಿಳಿನಗೆಯ ಮಾಸಪತ್ರಿಕೆ

ಬೆಲೆ ೩



ವೈಟೋಫೆರಿನ್

(ಆಧುನಿಕ ಶಕ್ತಿವರ್ಧಕ ಟಾನಿಕ್)

ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ, ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್‌ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ.

ತಯಾರಕರು :

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರಟರಿ ಲಿಮಿಟೆಡ್,

ಮಲ್ಲೇಶ್ವರಂ - - - ಬೆಂಗಳೂರು 3.

ಮುಂದಿನ ಬದಲಾವಣೆ

ಬೆಂಗಳೂರು:

ನ್ಯೂ ಸಿಟಿ — ಸ್ವಸ್ತಿಕ್

ಮೈಸೂರು: ಚಾಮುಂಡೇಶ್ವರಿ

ದಾವಣಗೆರೆ: ಮೋತಿ

ಶಿವಮೊಗ್ಗ: ವಿನಾಯಕ

ಚಿತ್ರದುರ್ಗ: ರೂಪವಾಣಿ

ಮಂಗಳೂರು: ರೂಪವಾಣಿ

ತುಮಕೂರು: ಕೃಷ್ಣಾ

ಚಿಕ್ಕಮಗಳೂರು: ಗುರುನಾಥ





ಹರಿಣಿ - ಇಂದುಶೇಖರ್ - ಸುಮತಿ - ವಾಸುದೇವ್

ಈ ಚಿತ್ರವು ಕನ್ನಡ ಚಿತ್ರರಂಗದಲ್ಲಿ ನೂತನ ಅಧ್ಯಾಯವನ್ನೇ ಪ್ರಾರಂಭಿಸಲಿದೆ.


A VIJAYA TALKIE RELEASE

ಪೊಂಗಲ್ ಹಬ್ಬಕ್ಕೆ ಬಿಡುಗಡೆ

ವಿಜಯಾರವರ

ಮಿಸ್ಸಮ್ಮ

-(ತೆಲುಗು-ತಮಿಳು)-



ಬೆಂಗಳೂರು, ಮೈಸೂರು ಮತ್ತು ಇತರ
ಕೇಂದ್ರಗಳಲ್ಲಿ ಪ್ರದರ್ಶನ

★

**ನಿಮ್ಮ ನೆಚ್ಚಿನ ತಾರಾಗಣವನ್ನುಳ್ಳ ಹಾಸ್ಯರಸಮಯ
ಆಕರ್ಷಕ ಚಿತ್ರ**

A VIJAYA TALKIE RELEASE

ಕೊರವಂಜಿ

ಸಂಪುಟ ೧೩ ಜನವರಿ ೧೯೫೫ ಸಂಚಿಕೆ ೧೦

ಕುಹಕಿಡಿಗಳು

ಜ್ಯೋತಿಷಿಗಳಿಗೆ ಈಗ ಸುಗ್ಗಿಯ ದಿನಗಳಂತೆ—

—ಸರ್ಕಾರಕ್ಕೆ ಅರ್ಜಿ ಬರೆದುಕೊಂಡಿರುವವರೆಲ್ಲಾ ಜ್ಯೋತಿಷ್ಕರ ಹತ್ತಿರ ಹೋಗಿ ನಮ್ಮ ಅರ್ಜಿಗೆ ಎಂದು ಉತ್ತರ ಬರಬಹುದು ಎಂದು ಪ್ರಶ್ನಿಸುತ್ತಿರುವರಂತೆ.

* * *

ಪ್ರಮುಖ ಬ್ಯಾಂಕುಗಳೆಲ್ಲಾ ರಾಷ್ಟ್ರೀಕರಣವಾಗುತ್ತವಂತೆ.

—ಅಂದಮೇಲೆ ಬೇಗ ಓವರ್‌ಡ್ರಾಫ್ಟ್ ತೆಗೆದುಕೊಳ್ಳಬೇಕು – ರಾಷ್ಟ್ರೀಕರಣವಾದಮೇಲೆ ಅದನ್ನು ತೀರಿಸಬೇಕಾದ ತುರ್ತು ಇರೋದಿಲ್ಲ ಅಲ್ಲವೇ ? ?

* *

ಗಂಧದಕಡ್ಡಿ ಕೈಗಾರಿಕೆಯಲ್ಲಿ ತೀವ್ರ ನಷ್ಟವುಂಟಾದ ಕಾರಣ ಈ ಕೈಗಾರಿಕೆಯನ್ನೂ ರಾಷ್ಟ್ರೀಕರಣ ಮಾಡಲೇಬೇಕು ಎಂದು ಚಳುವಳಿ ಆರಂಭವಾಗುತ್ತದಂತೆ.

—ಛೇ! ಛೆ! ಇದಕ್ಕೆ ಚಳುವಳಿ ಈ ರೀತಿ ಕೂಡದು. ಪ್ರತಿ ಸರ್ಕಾರಿ ಕಚೇರಿಯಲ್ಲೂ ೧೦ರಿಂದ ೫ರವರೆಗೆ ಗಂಧದಕಡ್ಡಿ ಹಚ್ಚಿರಬೇಕು, ವಾತಾವರಣ ಹಿತವಾಗಿರಬೇಕು ಎಂದು ಚಳುವಳಿ ಹೂಡಬೇಕು.

* * *

"ವಿದ್ಯುಚ್ಛಕ್ತಿ ಇಲಾಖೆಯವರೆಲ್ಲಾ ಮುಷ್ಕರ ಹೂಡುತ್ತಿದ್ದಾರೆ, ನೀವೂ ಹಾಗೇಮಾಡಿ ಸಾರ್" ಎಂದು ಶಾಲಾಬಾಲಕರೆಲ್ಲಾ ಮಾಸ್ತರುಗಳನ್ನು ಪುಸಲಾಯಿಸುತ್ತಿದ್ದಾರಂತೆ.

* * *

ಸೀಮೆಯೆಣ್ಣೆ ವ್ಯಾಪಾರಿಗಳೆಲ್ಲಾ ವಿದ್ಯುಚ್ಛಕ್ತಿ ಇಲಾಖೆಯುವರ ಮುಷ್ಕರಕ್ಕೆ-ವಾ ಸಂಪಿಗೆ ಉತ್ತೇಜನಕೊಡುತ್ತಿದ್ದಾರೆಂಬುದು ಶುದ್ಧ ಕುಹಕ ಅಷ್ಟೆ!

* * *

ನಾನ್‌ಗೆಜಿಟೆಡ್ ನೌಕರರ ಸಂಘದವರು, ವಿದ್ಯುಚ್ಛಕ್ತಿ ಇಲಾಖೆಯ ಪರಿಣಾಮವನ್ನು ಕಂಡಮೇಲೆ ತಮ್ಮ ಸಂಘಕ್ಕೆ ಶ್ರೀಯುತ ಕಣ್ಣನ್‌ರವರನ್ನು ಅಧ್ಯಕ್ಷರನ್ನಾಗಿ ಮಾಡಿಕೊಳ್ಳುತ್ತಾರೆಂಬುದು ಖಚಿತವಲ್ಲವಂತೆ.

* * *

"ಸರ್ಕಾರವು ಹಠದ ಅಸಹಕಾರ ಧೋರಣೆ ವಹಿಸಿತು" (ಒಬ್ಬರ ಹೇಳಿಕೆ)

"ಸರ್ಕಾರವು ಕಾರ್ಮಿಕರ ತಾಳಕ್ಕೆ ಸರಿಯಾಗಿ ಕುಣಿಯುತ್ತಿರುವುದರಿಂದಲೇ ಹೀಗಾಯ್ತು" (ಇನ್ನೊಬ್ಬರ ಹೇಳಿಕೆ)

— ಪಾಪ! ಸರ್ಕಾರ ಯಾರನ್ನೂ ಮೆಚ್ಚಿಸುವಂತಿಲ್ಲ.

* * *

ನಮ್ಮ ಜನವರಿ ಸಂಚಿಕೆಯು ಹೊರಬೀಳುವ ಮೊದಲೇ ವಿದ್ಯುಚ್ಛಕ್ತಿಯವರ ಮುಷ್ಕರವು ಕೊನೆಗೊಂಡಿತಾದರೆ -- ಅದಕ್ಕೆ ನಾವೇ ಕಾರಣರು ಎಂದು ವಿನಯದಿಂದ ಈಗಲೇ ಹೇಳಿಕೊಳ್ಳಬಹುದು ಎಲ್ಲಾ ಪತ್ರಿಕೆಯವರೂ.

* * *

ಈ ವಿದ್ಯುಚ್ಛಕ್ತಿಯವರ ಮುಷ್ಕರದಿಂದ ಒಂದು ಪ್ರಯೋಜನ — ನಾವು ಹಣ ಪಾವತಿಮಾಡದೆ ಇದ್ದರೂ ನಮ್ಮನೆಯ ದೀಪವನ್ನು ಕತ್ತರಿಸಲು ಯಾರೂ ಬರುವುದಿಲ್ಲವೆಂಬ ಭರವಸೆ.

* *

ವಿದ್ಯುಚ್ಛಕ್ತಿ ಇಲಾಖಾ ಸಂಘದ ಕಾರ್ಯಕಾರೀ ಸಮಿತಿಯವರಿಗೇ ಸರ್ಕಾರವನ್ನು ವಹಿಸಿಕೊಡುತ್ತೇವೆ ಎಂದಾಗ ಅವರು "ಖಂಡಿತ ಬೇಡ ಹಾಗಾದರೆ ನಮಗೆ ನಾವೇ ಮೋತಾಮಾಡಿಕೊಳ್ಳಬೇಕಾದೀತು" ಎಂದರೆಂಬುದು ದಿಟವಾದರೂ, ಸುದ್ದಿ ಶುದ್ಧ ಸುಳ್ಳಂತೆ.

* * *

ಉರಿಗಾಳು

ರಷ್ಯಾದೇಶದಲ್ಲಿ ಪೌಡರ್ ಲಿಪ್‌ಸ್ಟಿಕ್ಕುಗಳ ಉಪಯೋಗ ಅಪರೂಪ; ಅವರು ಸ್ವಾಭಾವಿಕವಾಗಿಯೇ, ಸುಂದರರು, ಎಂದು ಶ್ರೀಮತಿ ವಿಮಲ ರಂಗಾಚಾರ್ ಹೇಳಿದರು ...ನಾವು ಸ್ವಾಭಾವಿಕವಾಗಿ ಸುಂದರರಲ್ಲವೆಂಬುದನ್ನು ಹೇಳಬೇಕಾಗಿಯೇ ಇಲ್ಲ; ಆದ್ದರಿಂದಲೇ, ಇದನ್ನರಿತ ಮಹಿಳಾಮಣಿಯರು ಪೌಡರ್ ಲಿಪ್‌ಸ್ಟಿಕ್‌ಗಳನ್ನು ಉಪಯೋಗಿಸುತ್ತಿರುವುದು.

* * *

ಸೋವಿಯಟ್ ರಷ್ಯಾದಲ್ಲಿ ವಿದ್ಯಾರ್ಥಿಗಳೇ ತಮ್ಮ ಪ್ರೊಫೆಸರುಗಳನ್ನು ಚುನಾಯಿಸುತ್ತಾರಂತೆ.... ಈ ಸುದ್ದಿಯನ್ನು ಕೇಳಿದಮೇಲೆ, ನಮ್ಮಲ್ಲಿರುವ ಪ್ರೊಫೆಸರುಗಳೆಲ್ಲ ಕಮ್ಯೂನಿಸಂ ತತ್ವಕ್ಕೆ ತೀರ ವಿರೋಧಿಗಳಾಗುತ್ತಾರೆ, ಎಂಬುದರಲ್ಲಿ ಸಂದೇಹವಿಲ್ಲ.

* * *

ಹತ್ತುಮಕ್ಕಳನ್ನು ಹೆತ್ತ ತಾಯನ್ನು ರಷ್ಯಾದ ಸರ್ಕಾರ "ವೀರಮಾತೆ" ಎಂದು ಗೌರವಿಸಿ, ಆಕೆಗೆ ಭತ್ಯ ಕೊಡುತ್ತದೆ ...ಹತ್ತು ಹೆತ್ತರೂ, ಒಂದು ಮುತ್ತನ್ನೂ ಪಡೆಯದ ವೀರಮಾತೆಯರೇ ನಮ್ಮಲ್ಲಿ ಹೆಚ್ಚು.

* * *

ರಷ್ಯಾದಲ್ಲಿ ಬ್ರಹ್ಮಚಾರಿಗಳು ತಮ್ಮ ಸಂಪಾದನೆಯ ಶೇಕಡ ೬ರಷ್ಟು ಕಂದಾಯವಾಗಿ ಸರ್ಕಾರಕ್ಕೆ ಕೊಡಬೇಕು . ಆದರೆ, ನಮ್ಮಲ್ಲಿ ಸಂಪಾದನೆ ಪ್ರಾರಂಭವಾದ ತಕ್ಷಣ, ಮದುವೆಯಾಗೇಬಿಡುತ್ತಾರಾದ್ದರಿಂದ, ಈ ಸಮಸ್ಯೆ ಇಲ್ಲ.

* * *

ಮದುವೆಯಾಗಿ, ಮಕ್ಕಳಾಗದೆ ಇದ್ದಲ್ಲಿ, ರಷ್ಯಾದೇಶದ ದಂಪತಿಗಳು ತೆರಿಗೆ ಕೊಡುತ್ತಾರೆ.... ಯಾರಿಗೆ? ಡಾಕ್ಟರುಗಳಿಗೆ.

* *

ರಷ್ಯಾದಲ್ಲಿ ಶೇಕಡ ೮೬ ಜನಕ್ಕೆ ಉಚಿತ ವಿದ್ಯಾಭ್ಯಾಸ ಒದಗಿಸುತ್ತಾರೆ.... ನಮ್ಮಲ್ಲಿ, ಜನನಾಯಕರ ಪ್ರಭಾವದಿಂದ, ಶೇಕಡ ೪೦ ಜನರಿಗೆ ಉಚಿತ ಡಿಗ್ರಿಗಳನ್ನೇ ಒದಗಿಸುತ್ತಿದೇವೆ; ವಿದ್ಯೆಯನ್ನು ಅಭ್ಯಾಸಮಾಡುವ ತೊಂದರೆಯೇ ಇಲ್ಲ.

* * *

ನಾಯಿಯೊಂದನ್ನು ಸಾಯಿಸಿ, ಅದು ಸತ್ತಿತೆಂದು ಪ್ರಕಟವಾದನಂತರ, ಅದನ್ನು ರಷ್ಯನ್ ವೈದ್ಯರು ಮತ್ತೆ ಜೀವಂತಮಾಡಿದರು....ನಮ್ಮ ದೇಶದಲ್ಲಿ, ಅನು ನಾಯಿಗಳಿಗೆ ಮಾತ್ರ ಜೀವದಾನ ಕೊಡುವ ಪದ್ಧತಿ ಇದೆ.

*　　*　　*

ರಷ್ಯಾದ ಆಸ್ಪತ್ರೆಗಳಲ್ಲಿ, ಪ್ರತಿ ಕೋಣೆಯಲ್ಲೂ ಒಂದು ರೇಡಿಯೋ ಇರುತ್ತದೆ.... ರೋಗಿ ಆದಷ್ಟುಬೇಗ ಎದ್ದು ಓಡಾಡಿ ಮನೆಗೆ ಹಿಂತಿರುಗಲು ಇದು ಒಳ್ಳೆಯ ಚಿಕಿತ್ಸಾ ವಿಧಾನ.

*　　*　　*

ಓರ್ವ ಸ್ತ್ರೀ, ಸಂತಾನಮಾರ್ಗದಲ್ಲಿದಾಳೆಂದು ತಿಳಿದೊಡನೆಯೇ ಅವಳಕಡೆ ಅಲ್ಲಿ ವಿಶೇಷ ಗಮನ ಕೊಡುತ್ತಾರೆ....ನಮ್ಮಲ್ಲೂ ಅಷ್ಟೆ! ಎಲ್ಲರೂ ಆಕೇನ ತಿರುಗಿ ತಿರುಗಿ ನೋಡುತ್ತಾರೆ.

*　　*　　*

ರಷ್ಯಾದೇಶದ ಜನರು ಊಟದಲ್ಲಿ ಹೆಸರುವಾಸಿ; ಒಮ್ಮೆ ಒಂದು ಭೋಜನ ಕೂಟದಲ್ಲಿ, ಸಂಜೆ ಏಳುಗಂಟೆಗೆ ಊಟಕ್ಕೆ ಕೂತ ನಾವು, ಬೆಳಗಿನಜಾವ ಎರಡು ಗಂಟೆಗೆ ಊಟ ಮುಗಿಸಿ, ಎದ್ದೆವು (ಶ್ರೀಮತಿ ವಿಮಲ ರಂಗಾಚಾರ್)....ಅಷ್ಟು ತಿಂದಮೇಲೂ ಅವರು ಎದ್ದದ್ದೇ ಆಶ್ಚರ್ಯ.

*　　*　　*

ನಮ್ಮಲ್ಲೂ ಹಲವು ಹೋಟಲುಗಳಲ್ಲಿ ದೋಸೆಗಾಗಿ ಕೂತವರು ಬೆಳಗ್ಗೆ ಏಳರಿಂದ ಮಧ್ಯಾಹ್ನ ಎರಡರವರೆಗೆ ಏಳದೆ ಇರುವ ಸಂದರ್ಭಗಳು ಬಹಳ.

*　　*

ಮೂರು ನಾಲ್ಕುವರ್ಷ ವಯಸ್ಸಾಗುತ್ತಲೂ, ಅಲ್ಲಿ ಎಲ್ಲ ಮಕ್ಕಳನ್ನೂ ಶಾಲೆಗೆ ಸೇರಿಸಿಬಿಡುತ್ತಾರೆ ...ಹಾಗಾದರೆ, ಹತ್ತು ಮಕ್ಕಳನ್ನು ಪಡೆಯುವುದೇನೂ ಕಷ್ಟವೆನಿಸ ಲಾರದು.

*　　*　　*

"ಜಾತಕದ ಇಂದಿನ ಕತೆಗಳು"

ದಭ ದಭ ಜಾತಕ ೩೨೨.

ಒಂದಾನೊಂದು ಕಾಲದಲ್ಲಿ ಬೋಧಿಸತ್ವನು ಸಿಂಹದ ಹೊಟ್ಟೆಯಲ್ಲಿ ಹುಟ್ಟಿ ವಯಸ್ಸು ಬಂದಮೇಲೆ ಕಾಡಿನಲ್ಲಿ ವಾಸಿಸುತ್ತಿದ್ದನಂತೆ.

* * *

ಆ ಕಾಡಿನಲ್ಲೇ ಒಂದು ಮೊಲ ಅವರೆಕಾಯಿ ಹುಳಿ ತಿಂದು ಮಲಗಿದ್ದಾಗ "ಭೂಮಿ ಒಡೆದುಹೋದರೆ ಏನು ಗತಿ" ಎಂದು ಯೋಚಿಸಿತಂತೆ. ಬಿಲ್ವಪತ್ರೆ ಹಣ್ಣೊಂದು ತಾಳೆಗರಿಮೇಲೆ ಬಿದ್ದಾಗ "ದಭ ದಭ" ಶಬ್ದವಾಯ್ತಂತೆ. "ಓಹೋ ಭೂಮಿ ಒಡೆದೇಹೋಯ್ತು" ಅಂತ ಮೊಲ ನದಿಯಕಡೆಗೆ ಓಡಿತಂತೆ. ಅದನ್ನು ನೋಡಿದ ಮಿಕ್ಕ ಮೊಲಗಳೂ, ಜಿಂಕೆಗಳೂ, ಹಂದಿಗಳೂ, ನರಿಗಳೂ, ತೋಳಗಳೂ, ಕಾಡಾನೆಗಳೂ ಕೂಡ ಅದರ ಹಿಂದೆಯೇ ಓಡಿದುವಂತೆ —

ಸಿಂಹ ಕೂಡಲೆ ನದಿಯುದಡಕ್ಕೆ ಕಾಲುದಾರಿಯಲ್ಲಿ ಛಂಗಿಸಿಹೋಗಿ ಮೂರುಸಲ ಸಿಂಹನಾದವನ್ನು ಮಾಡಿತಂತೆ.

ಪ್ರಾಣಿಗಳೆಲ್ಲಾ ಸಿಂಹಭಯದಿಂದ ಹೆದರಿ ಗುಂಪಾಗಿ ಎದುರಿಗೆ ನಿಂತವಂತೆ

" ಏಕೆ ಈ ಗಾಭರಿ " ಎಂದಿತಂತೆ ಸಿಂಹ

ಕಾಡಾನೆಗಳು ತೋಳಗಳನ್ನು; ತೋಳಗಳು ನರಿಗಳನ್ನು; ನರಿಗಳು ಹಂದಿಗಳನ್ನು; ಹಂದಿಗಳು ಜಿಂಕೆಗಳನ್ನು; ಜಿಂಕೆಗಳು ಮೊಲಗಳನ್ನು; ಮೊಲಗಳು ನಡುಗುತ್ತಿದ್ದ ಮೊದಲ ಮೊಲವನ್ನು ನೋಡಿದುವಂತೆ.

ಮೊದಲ ಮೊಲ ಬಿಕ್ಕುತ್ತಾ ಹೇಳಿತಂತೆ " ಭು ಭು ಭೂಮಿ ಒಡೆದುಹೋದರೆ ಗ ಗ ಗತಿ ಏನು ಎಂದು ಊ ಊ ಊ ಊಟವಾದಮೇಲೆ ಮಲಗಿದ್ದಾಗ ಯೋಚಿಸಿದೆ. ಭು ಭು ಭು ಭೂಕಂಪವಾದ ಶಬ್ದ ಕೇಳ್ಸಿತು. ಭೂಮಿ ಒಡೆಯುವುದು ಖಂಡಿತ ಅಂತ ನ ನ ನ ನ ನದಿಕಡೆಗೆ ಓಡಿದೆ" ಅಂತ.

ಆ ಮೊಲವನ್ನು ಬೆನ್ನಮೇಲೇರಿಸಿಕೊಂಡು ಸಿಂಹವು ಆ "ದಭ ದಭ" ಶಬ್ದವಾದೆಡೆಗೆ ಸಿಂಹ ವೇಗದಿಂದ ಓಡಿತಂತೆ. ಅಲ್ಲಿ ತಾಳೆಯಗರಿಯ ಮೇಲೆ ಬಿದ್ದ ಪಕ್ವವಾದ ಬಿಲ್ವಪತ್ರದ ಹಣ್ಣನ್ನು ತೋರಿಸಿತಂತೆ. ಅದೇ ದಭದಭಕ್ಕೆ ಕಾರಣ, ಈ ಗಲಾಟೆಗೆ ನಿನ್ನ ಮಂದಮತಿಯೇ ಕಾರಣ ಎಂದಿತಂತೆ.

ವೃಗ ಸಂಪುಟದೆಡೆಗೆ ಹಿಂತಿರುಗಿ ಬಂದು ಹೀಗೆ ಹೀಗೆ ಆಯಿತು ಎಂದು ತಿಳಿವಳಿಕೆ ಕೊಟ್ಟಾಗ —

"ದಾರಿ ತಿಳಿಯದೆ ಇತರರ ಮಾತಿಗೆ ಕಿವಿಕೊಡುವವರು, ಇತರರ ಮಾತು ನಂಬುವವರು ಪ್ರಮಾದ ಹೆಚ್ಚಾದ ಅಜ್ಞಾನಿಗಳು.

ಶೀಲದಿಂದ ಕೂಡಿದವರು, ಪ್ರಜ್ಞೆಯಿಂದ ಬಂದ ಶಾಂತಿಯಲ್ಲಿ ರಮಿಸುವ ಧೀರರು, ಪರರ ಮಾತಿಗೆ ಕಿವಿಕೊಡರು"

ಎಂಬ ಅಭಿಸಂಬುದ್ಧಗಾದೆಯ ಪೂರ್ಣ ಅರ್ಥವನ್ನು ಸದಸ್ಯರೆಲ್ಲಾ ತಿಳಿದು ಕೊಂಡರಂತೆ.

—ಇಡೀ ಸಂಘ ವಿನಾಶವೇ ತಪ್ಪಿಸಲ್ಪಟ್ಟಿತಂತೆ.

ವಿಶ್ವಾಸ ಠರಾವು ಬಹುಮತದಿಂದ ಅನುಮೋದಿಸಲ್ಪಟ್ಟಿತಂತೆ.

* * *

— ಬಚ್ಚ

[ಇಂತಹ ಕತೆಗಳನ್ನು ಓದಬೇಕೆಂದಿರುವ ಸಹೃದಯರು, ಈ ಕಾಲಕ್ಕೆ ಅನ್ವಯಿಸಿ ಓದಿ ಸುಖಪಡಬೇಕೆಂದಿರುವ ರಸಿಕರು, ಅನುಭವಿಸಿ ಉದ್ಧಾರವಾಗಬೇಕೆಂದಿರುವ ಆತ್ಮಜ್ಞಾನಾಭಿಲಾಷಿಗಳು, ಶಾಕ್ಯ ಸಾಹಿತ್ಯಮಂಟಪದ "ಬುದ್ಧನಕತೆ"ಗಳನ್ನು ಕೊಂಡುಕೊಳ್ಳಬಹುದು. ಸಂ. ಸೂಚನೆ]

ಮಕ್ಕಳು ಮುದುಕರು ಜಾರುತ್ತಾರೆ;
ಚಿಕ್ಕವರೂ ಬಲು ಮಿಕ್ಕವರೂ... ಜಾರುತ್ತಾರೆ
ಕಾಲು ಜಾರಿ
ಮುಕ್ಕಾಲು ಜಾರಿ
ಪೂರ್ತ ಜಾರಿ
ತಾಯಂದಿರು ನಾಯಕ್ ಸಾನಿಯರು
ತಂದೆಯರು ಕುರಿ ಮಂದೆಯರು ತಾತಂದಿರು ಮುತ್ತಾತಂದಿದು
ಜಾರುವರೆಲ್ಲರು ಜರೆಯವರೂ ಬಿಳಿ ನರೆಯುವರೂ,
ತೆವಳುವ ಕೂಸೂ ಜಾರದೆ ಇಲ್ಲ; ತೆಗಳುವ ಮುನಿಗಳು ಜಾರದೆ ಇಲ್ಲ
ಹುಳಗಳು ಕ್ರಿಮಿಗಳು ಕೀಟಗಳು ಗುರು ಪೀಠಗಳು
ಹುಲಿ ಇಲಿ ಸೊಳ್ಳೆ ನೊಣ ಕಪಿ ಕರಡಿ ಎಲ್ಲವೂ
ಮನ್ಮಥನ ಬಾಣಕ್ಕೆ, ಮೋಹಿಸುವ ತಾಣಕ್ಕೆ
ಜಾರುವುದೆ!... ... ಎಲ್ಲ ಜಾರುವುದೆ!

ಸಂಪಾದಕರೇ!!

ಮೊನ್ನೆ ಮೊನ್ನೆ ನಗುಮೊಗದ ಮಾರ್ಷಲ್ ಟೀಟೋರವರು ಒಂದು ರುಮಾಲನ್ನು ಧರಿಸಿ ಹೂಮಾಲೆಯನ್ನು ಹಾಕಿಕೊಂಡಿದ್ದ ಅಂದವಾದ ಚಿತ್ರವನ್ನು ಪತ್ರಿಕೆಗಳಲ್ಲೆಲ್ಲಾ ನೋಡಿದೆವಷ್ಟೆ! ಆ ಚಿತ್ರವನ್ನು ನೋಡಿದಾಗ ಎಲ್ಲೊ ನೋಡಿದಹಾಗಿದೆಯಲ್ಲಾ ಎಂದು ಅನ್ನಿಸಿತು. "ಲೇ" ಅಂದೆ. 'ಲೇ' ಬಂದಾಗ ಈ ಚಿತ್ರ ಜ್ಞಾಪಕ ಇವೆಯೇನೇ ಅಂದೆ. "ಇದೆಲ್ಲಿ ಸಿಕ್ಕಿತು ಅಂದ್ರೆ, ಇದು ೨೫ ವರ್ಷಗಳ ಹಿಂದೆ ನಿಮ್ಮ ವರಪೂಜೇಲಿ ತೆಗೆಸಿದ್ದು. ಆಗಲೇ ನಮ್ಮನೆಯವರು ಅಂದಿದ್ದು ನನಗೆ ಇನ್ನೂ ಜ್ಞಾಪಕ ಇದೆ ಗಂಡೇನೋ ರುಸ್ತುಂ ಅದಾನೆ ಆದರೆ ಪ್ರಾಯ ಸ್ವಲ್ಪ ನಲವತ್ತನ್ನು ಮೀರಿರಬಹುದು ಎಂದು ಸ್ವಲ್ಪ ಪುಳ್ಳಂಪುರ್ಚಿ ಬೆರೆಸಿ ಅಂದಳು.

"ಮೂರನೆ ಮದುವೆ ಆದಾಕ್ಷಣ ಏನುಕಷ್ಟ ಆಯಿತೋ ನಿನಗೆ, ಈಗ ಐವತ್ತು ನಿನ್ನ ವಯಸ್ಸು; ಭಾರತಾದ್ಯಂತ ಮೂಲೆಗೊಂದರಂತೆ ಎಂಟು ಮಕ್ಕಳಿದ್ದಾರೆ." ಎಂದು ಹೇಳಿ ಬೇಗ ಅವಳ ಬಾಯಿಗೆ ಅಂಕುಶ ಹಾಕಿದೆ. ನಂತರ ಕೇಳಿದೆ ಆ....ಗ ನನ್ನ ರುಮಾಲೂ ಹೀಗೆ ಟೀಟೋ ರುಮಾಲಿನಹಾಗೆ ಸುಕ್ಕು ಸ-ಕ್ಕಾಗಿತ್ತೇನೆ? ಅಥವಾ ಗರಮಾಗರಂ ಮೈಸೂರು ರುಮಾಲು ಇದ್ದಹಾಗಿತ್ತೋ? ಎಂದೆ. ಮುದಿವಯಸ್ಸಿನಲ್ಲಿ ಏನೋ ಚಪಲ ಆಗ ಹಾಗೆಲ್ಲಾ ಇದ್ದಿರಿ ಅಂದರೆ ಈಗೇನೋ ಖುಷಿ.

"ಅದು ಹೇಗೆ ಇರುತ್ತೆ ಅಂದರೆ. ಮದುವೆ ಕಾಲದಲ್ಲಿ ನಿಮಗೆ ಹಸಿವ್ಯೆ. ರುಮಾಲೂ ಹಸಿ. ಅದಕ್ಕೇ ಅದು ಹಸುಕಲು ಹಸುಕಲಾಗೇ ಇರುತ್ತೆ ರುಮಾಲು ಹೇಗಿದ್ದರೇನು ನೀವು ಗರಿಗರಿಯಾಗಿದ್ದಿರಿ. ಈಗ ನೀವು ಹಸುಕಲು ಸುಕ್ಕಲು ಅದಕ್ಕೇ ರುಮಾಲಾದರೂ ಗರಿಗರಿಯಾಗಿರುತ್ತೆ" ಎಂದು ನಾರೀಮುಡಿಯಲ್ಲಿ ಸುತ್ತಿ ಬಾಣ ಬಿಟ್ಟಳು.

ನನಗೆ ಆಗ ಅನ್ನಿಸಿತು; ಈ ಚಿತ್ರನೋಡಿ ಏನೋ ಜ್ಞಾಪಕ ಬಂದು ಮೂರನೆ ಮದುವೆಯ ಮೂವತ್ತು ವರ್ಷಗಳ ಜೀವನವನ್ನೆಲ್ಲಾ ಟೀಕೆಗೆ ಗುರಿಮಾಡಿಸಿದ್ದಾಯ್ತು. ಹೀಗೇನೇ ಮನೆಗೆ ಹೋದಮೇಲೆ ಮಾರ್ಷಲ್ ಟೀಟೋಗೂ ಚಿತ್ರನೋಡಿ ಟೀಕಿಸುವವರು ಇದ್ದಾರೆಯೇ? ಪತ್ರಿಕೆಗಳಲ್ಲಿ ಈ ಸುದ್ದಿ ಎಲ್ಲೂ ಕಾಣಿಸಲಿಲ್ಲವಾಗಿ, ನಿಮಗೆ ಇಂತಹ ಸುದ್ದಿಗಳಲ್ಲಿ ಸರ್ವಜ್ಞತ್ವವಿರಬಹುದೆಂಬ ಊಹೆಯಿಂದ ಈ ಪತ್ರ ಬರೆದಿದ್ದೇನೆ. ದಯುವಿಟ್ಟು ಉತ್ತರಿಸುವಿರಾ?

ನಿಮ್ಮವ.
ಪ್ರಕಾಶ್.

[ಕಂಡವರ ಹೆಂಡಿರ ವಿಚಾರ ನಾವು ಪೂರ್ಣ ಅಲ್ಪಜ್ಞರು. ಸಿನಿಮಾ ಪತ್ರಿಕೆಗಳಿಗೆ ನೀವು ಬರೆದರಾದೀತು.] [ಸಂ]

ಅನ್ನಸತ್ವಗಳ - ಅನುಭವ

"ಡಾಕ್ಟರೇ! ಡಾಕ್ಟರೇ! ಬೇಗ ಬನ್ನಿ, ಹೊತ್ತಾಗಿ ಹೋಯ್ತು" ಎಂದು ಅವಸರದ ದನಿಯಲ್ಲಿ ಯುವಕ ಕೂಗಿದ

ನಾನು ಪರದೆಯಾಚೆಯಿಂದ ಕ್ರಾಸ್‌ವರ್ಡ್ ಹಾಳೆಯನ್ನು ಮಡಿಸಿರಿಸಿ, ಈಚೆ ಕಡೆಗೆ ಬಂದೆ. ಸುಮಾರು ೧ ಗಂಟೆ ಮಧ್ಯಾಹ್ನ-ದವಾಖಾನೆಯಿಂದ ಮನೆಗೆ ಹೊರಡುವ ಸಮಯ. ಬಂದಯುವಕ ಮೇಜಿನಮೇಲೆ ಒಂದು ತ್ರಿದಳ ಟಿಫಿನ್ ಕ್ಯಾರಿಯರನ್ನಿಟ್ಟ. ನನ್ನೆದುರಿಗೆ ಬಿಡಿಸಿದ, ಒಂದರಲ್ಲಿ ಅನ್ನ ಹುಳಿ. ಒಂದರಲ್ಲಿ ಸಾರನ್ನ ಇನ್ನೊಂದರಲ್ಲಿ ಮೊಸರನ್ನ ಸೊಪ್ಪಿನ ಪಲ್ಯ ಇದ್ದುದು ಕಂಡಿತು.

"ನನ್ನ ತೂಕ ೧೧೮ ಪೌಂಡು, ವಯಸ್ಸು ೧೯-ಲಿಂಗ ಗಂಡು, ವಿದ್ಯಾರ್ಥಿ, ಆಟ ಪಾಟ ಆಡುತ್ತೇನೆ, ಮಧ್ಯಾಹ್ನಕ್ಕೆ ಈ ಊಟ ನನಗೆ ಸಾಕೇ? ಇದರಲ್ಲಿ ಅನ್ನಾಂಶ ಅ ಇಂದ ಕ್ಷ ತನಕ ಎಲ್ಲಾ ಇದೆಯೇ? ಸುಲಭವಾಗಿ ಜೀರ್ಣಿಸುವಹಾಗೆ ಇದನ್ನು ಬೇಯಿಸಿ ಅಡಿಗೆ ಮಾಡಿದ್ದಾರೆಯೇ? ಈ ಊಟದಿಂದ ನನಗೆ ವಯಸ್ಸಾದ ಮೇಲೆ ರಕ್ತದ ಒತ್ತಡವಾಗಲೀ, ಮಧು ಮೂತ್ರವಾಗಲೀ, ಕಣ್ಣು ಪೊರೆಯಾಗಲೀ, ಮೃದು ಮೂಳೆಗಳಾಗಲೀ, ಬಾರದಿರುವಂತೆ ಸಕಲ ಆಹಾರ ಸತ್ವಗಳು, ಲೋಹ ಲವಣಗಳು, ಶರ್ಕರ ಪಿಷ್ಟಗಳು, ಇವೆಯೇ! ಬೇಗ ಪರೀಕ್ಷಿಸಿ ಹೇಳಿ. ಇನ್ನರ್ಧ ಗಂಟೆಗೆ ಇಂಗ್ಲೀಷ್ ಪಾಟ ಶುರುವಾಗುತ್ತೆ. ಪ್ರಿನ್ಸಿಪಾಲರೇ ಅಪಾಠ ಹೇಳುತ್ತಾರಾದ್ದರಿಂದ ಇಂಗ್ಲೀಷಮೇಲೆ ಮೋಹ ಇಲ್ಲದಿದ್ದರೂ, ಪ್ರಿನ್ಸಿಪ್ಪಿನ ಭಯಕ್ಕಾದರೂ ಹೊತ್ತಿಗೆ ಸರಿಯಾಗಿ ಹೋಗಬೇಕು."

ಎಂದು ಒಂದೇ ಉಸುರಿಗೆ ಹೇಳಿದ.

ಧಿಟ! ನನ್ನದೇ ತಪ್ಪು. ಆ ಕಾಲೇಜಲ್ಲಿ ಆಹಾರದ ವಿಷಯವಾಗಿ ಒಂದು ಭಾಷಣ ಬಿಗಿದಿದ್ದೆ. ಇಂತಹ ಆಹಾರ ತೆಗೆದುಕೊಂಡರೆ ಇಂತಹ ಕಾಯಿಲೆಗಳನ್ನು ಬಾರದಂತೆ ಮಾಡಬಹುದು. ಇಂತಹ ಆಹಾರ ಹೀಗೆ ಅಡಿಗೆಯಾಗಿದ್ದರೆ ಈ ರೀತಿ ಶಕ್ತಿಬರುತ್ತದೆ, ಎಂದೆಲ್ಲಾ ಪುಸ್ತಕದ ಜ್ಞಾನವನ್ನೂ ಪ್ರದರ್ಶಿಸಿದ್ದೆ. ಕಾಯಿಲೆ ಬಂದಮೇಲೆ ನರಳುವ ಬದಲು ಬಾರದಂತೆ ನಮ್ಮ ಆಹಾರದ ಸಮತೆ ಮತ್ತು ಜ್ಞಾನದಿಂದ ದೇಹವನ್ನು ಕಾಪಾಡಬಹುದೆಂದು ಹೇಳಿದ್ದೆ.

ಇನ್ನು ಮೂವತ್ತು ವರ್ಷದ ಮುಂದಕ್ಕೆ ಆಗಬಹುದಾದ ಕಾಯಿಲೆಗಳಿಗೆ ಮುಂಜಾಗ್ರತೆ ತೆಗೆದುಕೊಳ್ಳುವ ರೀತಿಯಲ್ಲಿ ಈ ಯುವಕ ಕಾಲೇಜಿಂದ ಬಂದು ಈ ಪವಾಡ ನಡೆಸಿದ್ದ. ಒಂದು ರೀತಿಯಲ್ಲಿ ನನಗೆ ಖುಷಿ. ನನ್ನ ಭಾಷಣದಿಂದ ಈ ತರಹ ಒಳ್ಳೆಯ ಪರಿಣಾಮ ಆಯಿತಲ್ಲಾ ಅಂತ!

ಭೇಷ್‌ಕಣಯ್ಯ! ಸ್ವಲ್ಪ ಇರು ಇದರ ತೂಕ ನೋಡಿ, ಇದು ಸರಿಯೇ ಹೇಳುತ್ತೇನೆ ಎಂದೆ.

ತೂಕ ನೋಡ್ತಾ ಕೂತುಕೊಂಡರೆ ಹ್ಯಾಗೆ ಡಾಕ್ಟರೇ! ನಮ್ಮ ಕ್ಲಾಸಿನವರೆಲ್ಲಾ ತಂತಮ್ಮ ಟಿಫಿನ್‌ಕ್ಯಾರಿಯರುಗಳನ್ನು ತರುತ್ತಿದ್ದಾರೆ ನಿಮ್ಮ ಅಜಮಾಯಿಷಿಗೆ. ಎಂದ ಯುವಕ.

ಬಾಗಿಲಲ್ಲಿ ಒಂದು ಯುವಕ ಪಟಾಲಮ್ಮೇ ಬಂದಂತೆ ಕಾಣಿಸಿತು.

ಬೆದರಿದೆ, ನಾನು. ನೂರಾರು ಯುವಕರ ಟಿಫಿನ್‌ಕ್ಯಾರಿಯರ ಒಳಗಿರುವುದನ್ನು ಪರೀಕ್ಷೆಮಾಡಲು ಕುಳಿತರೆ ಮುಂದೆ ನನ್ನ ಗತಿ. ನಾನು ಮಾಡಿದ ಭಾಷಣವನ್ನು ಕೇಳಿದವರು ಈ ರೀತಿ ಸೇಡುತೀರಿಸಿಕೊಂಡರೆ ನಾನು ಏನಾದರೂ ಮಾಡಲೇಬೇಕಲ್ಲವೇ?

ಬೇಗ ಕೈತೊಳೆದುಕೊಂಡು ಎದುರಿಗಿದ್ದ ಒಂದೊಂದು ಡಬ್ಬಿಯಿಂದಲೂ ಒಂದೊಂದು ತುತ್ತು ತೆಗೆದುಕೊಂಡು ತಿನ್ನಲಾರಂಭಿಸಿದೆ—ಎರಡನೇ ತುತ್ತಿಗೆ ಕೈಹಾಕಿದೆ.

"ಡಾಕ್ಟರ್! ಸಾರ್! ಸಾರ್! ದಮ್ಮಯ್ಯ." ಎಂದ ಯುವಕ. ನೋಡಿ ಹೇಳಿ ಅಂದರೆ ರುಚಿ ನೋಡುಕ್ಕೆ ಶುರುಮಾಡಿದರಲ್ಲಾ ಸಾರ್ ಎಂದ ಅಂಗಲಾಚಿದ.

ಆ ಹೊತ್ತಿಗೆ ಹಿಂದೆ ಬಂದ ಯುವಕ ತಂಡವಷ್ಟೂ ಹಿಂತಿರುಗಿದ್ದು ಕಾಣಿಸಿತು.

"ಏನೋ ಸಾರ್! ರೋಘ್‌ಮೇಲೆ ಭಾಷಣಮಾಡಿದಿರಿ ಅಂತ ನಾವೆಲ್ಲಾ ಈ ಕುಹಕಾಟಕ್ಕೆ ಏರ್ಪಡಿಸಿಕೊಂಡು ಬಂದರೆ ನನ್ನ ಹೊಟ್ಟೆಮೇಲೆ ಈ ದಿನ ಒದ್ದೆಬಟ್ಟೆ ಹಾಕಿಯೇ ಬಿಟ್ಟರಲ್ಲಾ" ಎಂದು ಅಳುಮೊಗೆಯಾದ.

"ಹಾಗಲ್ಲಾ ಯುವಕ. ಇಂದು ಏಕಾದಶಿ ಒಪ್ಪತ್ತು ಉಂಡರೆ ಯುವಕರಿಗೆ ಆರೋಗ್ಯಕರ ಅದಕ್ಕೇ ಹೀಗೆಮಾಡಿದೆ" ಎಂದು ಸಮಾಧಾನವನಿತ್ತು ಕಳುಹಿಸಿಕೊಟ್ಟೆ ಎಂಜಲು ಟಿಫಿನ್‌ಕ್ಯಾರಿಯರ ಜತೆಗೆ – ಯುವಕನನ್ನು

—ಪಂಡಿತ.

ಕೊರವಾವಲೋಕನ

ಟೈಪ್ ರೈಟರ್ ನಡಸ್ತಾ ಇದ್ದರೆ ಹೇಗೆ ಶಬ್ದ ಆಗುತ್ತೆ ನೋಡಿ, ಹಾಗೆ ಶಬ್ದ ಆಗ್ತಾ ಇತ್ತು, ಮಳೆಹನಿ ನಾನು ನಿಂತಿದ್ದ ಜಿಂಕ್‌ಷೀಟಿನ ಷೆಡ್ಡಿನಮೇಲೆ ಬೀಳುತ್ತಿದ್ದಾಗ.

ಕ್ಲಬ್ಬಿನಿಂದ ಸ್ವಲ್ಪದೂರ ವಾಕಿಂಗ್ ಹೋಗಿಬರೋಣ, ದೇಹದಣಿದರೆ ಬಾಯಿ ಒಣಗುತ್ತೆ ಅಂತ ಹೊರಟಿದ್ದೆ. ಹೊರಟಾಗ ಆಕಾಶ ನೀಲಿಯಾಗಿಯೇ ಇತ್ತು. ಸ್ವಲ್ಪದೂರ ಹೋಗಿದ್ದೆ. ಅಷ್ಟರಲ್ಲೇ ಬಿಸಿಲು ಮಳೆ ಬಿಸಿಬಿಸಿಯಾಗೇ ಬಂತು. ಹತ್ತಿರವೇ ಒಂದು ಜಿಂಕ್‌ಷೀಟ್ ಹಾಕಿದ್ದ ಹಂಗಾಮಿ ಗುಡಾರ ಇತ್ತು. ರಸ್ತೆ ರಿಪೇರಿ ಮಾಡೋ ಗಾಂಗಿನವರು ಸಾಮಾನಿಡುಕ್ಕೆ ಹಾಕಿದ್ದದ್ದು. "ಮಳೆಗಾಲೇ ಅದೇಗತಿ" ಎಂದು ಅದರ ಆಶ್ರಯ ಹೊಕ್ಕಿದ್ದೆ.

ಎರಡೇ ಕ್ಷಣದಲ್ಲಿ ಮೇಲುಸಿರು ಆಡುತ್ತಾ ಓಡುತ್ತಾ ಕೊರವ ಅಲ್ಲಿಗೆ ಬಂದ. ಮುಸಲಾ ಒಂದು ಆನೆ ಎತ್ತರವಾಗಿತ್ತು ಅನ್ನಿ. ಅದು ಹೆಣ್ಣಾಗಿತ್ತು ಅನ್ನಿ. ಅದಕ್ಕೆ ನವಮಾಸ ತುಂಬಿತ್ತೂ ಅನ್ನಿ. ಅದಕ್ಕೆ ಬೇನೆ ಕಾಣಿಸಿತ್ತು ಅನ್ನಿ. ಅದು ಹೆರಿಗೆ ಆಸ್ಪತ್ರೆಗೆ ಓಡುತ್ತಿತ್ತು ಅನ್ನಿ ಅದು ಹೇಗೆ ಕಾಣಿಸುತ್ತೋ ಆ ಹೊತ್ತಿನಲ್ಲಿ ಹಾಗೆ ಕಾಣಿಸಿದ ಕೊರವ, ಆಗ.

ಬಾ! ಬಾ! ಕೊರವ ಈ ಬಿಂದಿಗೆಮೇಲೆ ಕೂತುಕೊಂಡು ಸ್ವಲ್ಪ ಸುಧಾರಿಸಿಕೊ ಎಂದು ಹತ್ತಿರಿದ್ದ ಬಿಂದಿಗೆಯನ್ನು ತಲೆಕೆಳಗೆ ಮಾಡಿ ಸುಖಾಸನವನ್ನು ಏರ್ಪಡಿಸಿದೆ. ಜೀವನ ಮಿತ್ರನಿಗೆ ಅಷ್ಟೂಸೇವೆ ಬೇಡವೇ?

ಆಕಾಶದಲ್ಲಿದ್ದ ನೀರೆಲ್ಲಾ ಭೂಮಿಗೆ ಬಿದ್ದುಹೋಗಿರಬೇಕು. ಭೂಮಿಗೆ ಬಿದ್ದು ಹೋದ ನೀರೆಲ್ಲಾ ಸಾಗರವನ್ನು ಸೇರಿರಬೇಕು. ಸಾಗರದ ನೀರೆಲ್ಲಾ ಅಣು ಬಾಂಬಿನ ಕಾಟದಿಂದ ಆಕಾಶಕ್ಕೆ ತಿರುಗಿ ಏರಿರಬೇಕು. ಅಲ್ಲಿ ಪುನಃ ಮೋಡ ಗಟ್ಟಿರಬೇಕು ಎನ್ನಿಸಿತು ನನಗೆ ಅಷ್ಟುಹೊತ್ತೂ ಕೊರವ ಕಿಮುಕ್ ಕಮುಕ್ ಅನ್ನಲಿಲ್ಲ. ಅಷ್ಟು ಬೇಗ ಬೇಗ ಓಡಿಬಂದುದು ಕೊರವನಂತಹ ವಾಚಾಲರನನ್ನು ಮೂಕಂ ಕರೋತಿ ಮಾಡಿಬಿಟ್ಟಿತ್ತು. ಸುಮಾರು ಹದಿನೈದುನಿಮಿಷ ಆಗಿದ್ದರೂ ಆಗಿರಬಹುದು.

ನಾನು ಬೇಸರಪಟ್ಟು ಹೊರಡಲುದ್ಯುಕ್ತನಾದಾಗ ಕೊರವ ಹೇಳಿದ "ಸ್ವಲ್ಪ ಇರು ಮಗೂ! ನಾನೂ ಬರುತ್ತೇನೆ. ನನ್ನ ಬಾಯೂ ಒಣಗಿದೆ. ಮೈಯೆಲ್ಲಾ ತೋಯ್ದಿ

ದ್ದರೂ ಬಾಯಿಮಾತ್ರ ಒಣಗುತ್ತೆ. ಏನು ಸೋಜಿಗ ನೋಡು—ಮೈತೂಕ ಇಳಿಸಲು ವ್ಯಾಯಾಮಕ್ಕೇ ಅಂತ ಹೊರಟರೆ, ಬಲು ಹಶಿವಾಗಿ ಎರಡರಷ್ಟು ತಿನ್ನೋಹಾಗಾ ಗುತ್ತೆ, ಎರಡರಷ್ಟು ಮೈಬರುತ್ತೆ. ಕ್ಲಬ್ಬಿನಲ್ಲಿ ಈ ಪೊಟ್ಟಣ ತೆಗೆದರೆ ಪಾಲುದಾರರು ಬರುತ್ತಾರೆ ಎಂದು ಈ ವಾಕಿಂಗಿಗೆ ಹೊರಟರೆ ಈ ನಾಯಿನರಿ ವಿವಾಹದ ಮಳೆ ಬಂದು, ನನ್ನನ್ನಿಲ್ಲಿಗೆ ತಂದು ನಾ ತಂದ ಪೊಟ್ಟಣವನ್ನು ನಿನ್ನ ಜತೇಲಿ ಭಾಗ ಮಾಡೋಹಾಗೆ ಆಯಿತು, ಎಂದನ್ನುತ್ತಾ ಜೇಬಿನಿಂದ ಒಂದು ಪೊಟ್ಟಣತೆಗೆದು ನನಗೂ ಒಂದು ಹಿಡಿಕೊಟ್ಟ. ಎಂತಹಾ ಓಂಪುಡಿ ಅಂತೀರೀ! ಓಂಕಾರದ ಸರ್ವಸ್ವವನ್ನೂ ಪುಡಿ ಪುಡಿ ಯಿಂದಲೇ ರಚಿಸಬಹುದು ಎಂದು ಸರ್ವಶಕ್ತನು ಅಲ್ಪರಿಗೆ ನಿದರ್ಶಿಸಲಾಗಿ ಈ ಓಂಪುಡಿಯನ್ನು ಸೃಷ್ಟಿಸಿದನೋ ಎನ್ನುವ ಆಧ್ಯಾತ್ಮಿಕ ಔನ್ನತ್ಯಕ್ಕೆ ಒಂದೇಹಿಡಿ ಒಂದೇ ಏಟಿಗೆ ಏರಿಸಿತ್ತು ನನ್ನ.

ಮಳೆನಿಂತಿತು—ಪೊಟ್ಟಣ ಖಾಲಿಯಾಗಿತ್ತು—ಸಹಾರಾದಲ್ಲಿ ಕುದುರೆ, ಒಂಟೆ, ಕೊರವರು ಬಿಸಿಲ್ಗಾಲ ಮಧ್ಯಾಹ್ನದಲ್ಲಿ ಓಯಸ್ಸಿಸ್ಸಿಗೆ ಓಡುವಂತೆ ನಾವಿಬ್ಬರೂ ಕ್ಲಬ್ಬಿಗೆ ನಡೆದವು.

* * *

ಕ್ರಿಸ್‌ಮಸ್ ಹಬ್ಬ, ಹಿಂದೂಗಳಿಗೆ, ಹಣವಂತ ಹಿಂದೂ ಸದ್ಗೃಹಸ್ಥರಿಗೆ ಬಲು ಹಸನಾದ ಹಬ್ಬ. ದೇವರಕಾಟ ಇಲ್ಲ. ಪೂಜಾರಿಗಳ ಗೋಳು ಇಲ್ಲ. ಹಬ್ಬವನ್ನು ನಿಶಿರಾತ್ರಿಯಲ್ಲಿ ಸುಖವಾಗಿ ಅನುಭವಿಸುವವರು ಹಿಂದೂಗಳು ಮಾತ್ರ, ಕ್ಲಬ್ಬುಗಳಲ್ಲಿ.

ಹೊಸವರ್ಷ ಆರಂಭವಾಗಿ ಅರ್ಧಗಂಟೆಯಾಗಿತ್ತು ದೇವಮಂದಿರದಿಂದ, ಸ್ಯಾಮುಯಲ್ ಮನೆಗೆ ಹೋಗುವಮುನ್ನ ಕ್ಲಬ್ಬಿಗೆ ಬಂದಿದ್ದ. ಅಲ್ಲಿದ್ದ ಮಿತ್ರರಿಗೆ ಹೊಸವರ್ಷದ ಶುಭಾಶಯಗಳನ್ನು ಆದಷ್ಟುಬೇಗ ಸಲ್ಲಿಸಲು.

ನನ್ನನ್ನು ನೋಡಿ ನನಗೆ ಶುಭಾಶಯಗಳನ್ನು ಕೋರಿ "ಕೊರವ ಎಲ್ಲೋ ಇಲ್ಲೇ ಇರಬೇಕಲ್ಲೋ" ಅಂದ

"ಟೈಟೋ" ಎಂದೆ ಮುಗುಮ್ಮಾಗಿ.

"ಆವ ಜನವರೀಲಲ್ಲೇನೋ ಬರೋದು ಮೈಸೂರಿಗೆ" ಅಂದ ಸ್ಯಾಮುಯಲ್ —ಸ್ಯಾಮುಯಲ್ ಮಗುವಿನಂತಹ ಮನುಷ್ಯ. ರಾಕ್ಷಸರ ಜತೆಯಲ್ಲಿದ್ದರೂ ದೇವ ಲೋಕದ ದೇವ ಶಿಶುವಿನಂತಹ ಅಕೃತ್ರಿಮ ಮನಸ್ಸು.

* * *

ಆಹಾ ಹಾ ಹಾ! ಎಂದು ಗಹಗಹಿಸಿದ ಕೊರವ ಆ ಸಂಜೆ ಕ್ಲಬ್ಬಿನಲ್ಲಿ ಪೇಪರ್ ಓದುತ್ತಿದ್ದಾಗ.

ಹಣೆಗಳನ್ನೆಲ್ಲಾ ಜಿಂಕ್‌ಷೀಟ್ ಮಾಡಿಕೊಂಡೆವು ನಾವು. ನಮ್ಮನ್ನೆಲ್ಲಾ ನೋಡಿ ನಗುನಿಲ್ಲಿಸಿ ಒಂದೆರಡು ನಿಮಿಷಗಳಾದಮೇಲೆ ಕೊರವ ಹೇಳಿದ.

"ವಿಜಯನಗರದ ಮಹಾವೈಭವದ ಕಾಲದಲ್ಲಿ ಮಾನ್ಯಮಿತ್ರ ಮಹಾರಾಜರು ಬಂದಾಗ ಹೊಸ ರಸ್ತೆಗಳನ್ನೇ ನಿರ್ಮಿಸಿ ರಸ್ತೆಯಲ್ಲಿ ಮಖಮಲನ್ನೇ ಹಾಸಿ ಮಖ ಮಲ್ಲಿನ ಅಂಚಿಗೆಲ್ಲಾ ವಜ್ರದ ಹರಳನ್ನೇ ಕಟ್ಟುತ್ತಿದ್ದರಂತೆ" ಎಂದ.

"ಅದಕ್ಕೇ ಆ ರಾಜ್ಯ ಹಾಗಾಗಿದ್ದು" ಎಂದೆ, ಜನತಾ ರಾಜ್ಯದ ಪ್ರತಿನಿಧಿಯಾದ ನಾನು.

"ಈಗ ನಿನ್ನ ಜನತಾ ರಾಜ್ಯಭಾರದಲ್ಲಿ ಏನು ವ್ಯತ್ಯಾಸವೋ ಕಾಣೆನಲ್ಲಾ" ಎಂದ ಕೊರವ.

ನಾನು ಹುಬ್ಬೆತ್ತಿದೆ. ಪತ್ರಿಕೆಯಿಂದ ಓದಿದ.

"ಯೂಗೋಸ್ಲಾವಿಯಾದ ಅಧ್ಯಕ್ಷರು ಬಂದಾಗ ರೈಲು ನಿಲ್ದಾಣದಲ್ಲಿ ಕೆಂಪು ಮಖಮಲ್ಲಿನ ಕಿಂಕಾಬಿನ್ನೇ ನಡೆಯುವೆಡೆ ಹಾಸಿದ್ದರು. ಜನತಾರಾಜ್ಯದ ಅತಿಥಿ ಅಧ್ಯಕ್ಷನಿಗಾಗಿ ಹೊಸವೈಭವದ ರೈಲುಗಾಡಿಗಳನ್ನೇ ನಿರ್ಮಾಣ ಮಾಡಿದ್ದರು, ಜನತಾರಾಜ್ಯದ ಮಾನ್ಯ ಅತಿಥಿಗಾಗಿ, ಹಾರೋಪ್ಲೇನಿನಲ್ಲಿ ವಿಲಾಯಿತಿಯಿಂದ ಊಟದ ಪಿಂಗಾಣಿ ತಟ್ಟೆಗಳನ್ನೇ ತರಿಸಿದ್ದರು."

ನಾನು ಅಲ್ಲಿರುವುದು ಅವಿವೇಕ ಎಂದು ಚೀಟಿಯಾಟದೆಡೆಗೆ ಹೊರಟೆ.

* * *

ಆವಡಿ ಕಾಂಗ್ರೇಸಿನ ಸೊಬಗನ್ನು ನೋಡಿ ನಾನು ಮುಗ್ಧನಾಗಿದ್ದೆ—ಚಿತ್ರಗಳಲ್ಲಿ, ವರ್ಣನೆಗಳಲ್ಲಿ ದಕ್ಷಿಣಭಾರತದ ದೇವಾಲಯಗಳನ್ನು ಯಾವರೀತಿ ಆವಡಿಯಲ್ಲಿ ಆಳವಡಿಸಿಕೊಂಡಿದ್ದಾರೆಂಬುದನ್ನು ವಿಶದೀಕರಿಸುತ್ತಿದ್ದೆ ಶನಿವಾರ ಸಂಜೆ ಕ್ಲಬ್ಬಿನಲ್ಲಿ.

ಕಡೆಯ ಕುರ್ಚಿಯಿದ್ದೆಡೆಯಿಂದ ಕುದುರೆ ಕೆಮ್ಮಿದಂತೆ ಶಬ್ದವಾಯಿತು. ನಾಯಿಕೆಮ್ಮು ಕೇಳಿದ್ದೆ, ಬೆಕ್ಕಿನ ಕೂಗಿನಂತಹ ಕೆಮ್ಮು ಕೇಳಿದ್ದೆ. ಆದರೆ ಕುದುರೆಯ ಕೆಮ್ಮು ಪ್ರೇಮಸೂಚನೆಯೋ ಪ್ರೇತ ವೀಕ್ಷಣೆಯಿಂದಲೋ ತಿಳಿಯುವುದು ಕಷ್ಟವಲ್ಲವೇ?

ಮಾತುನಿಲ್ಲಿಸಿ ಆ ಕಡೆ ತಿರುಗಿದೆ. ಆ ಕಡೆಕುರ್ಚಿಯಲ್ಲಿ ಕೂತಿದ್ದ ಕೊರವ.

ಮಾಸ್ತರ ಉತ್ತರಗಳನ್ನು ಶಿಷ್ಯನಿಗೆ ಪರೀಕ್ಷೆಗೆ ಕೊಟ್ಟಹಾಗಾಯಿತು ನನಗೆ. ಕಾರಣ ಬಾಯಿಮುಚ್ಚಿದೆ.

ಕೊರವ ಕುದುರೆ ಕೆಮ್ಮು ನಿಲ್ಲಿಸಿ ಹೇಳಿದ "ಆವಡಿಯಲ್ಲಿ ದೇವಸ್ಥಾನಗಳನ್ನೇ ಹಿರಿದಾಗಿ ಮಾಡಿದ್ದು ನ್ಯಾಯವೇ? ಈಗಿನ ದೇವಸ್ಥಾನಗಳಲ್ಲಿ ಪೂಜಾರಿಗಾಗುವ ಮರ್ಯಾದೆ ದೇವರಿಗೆಲ್ಲಿ ಬಂತು? ನಾನು ಮಧುರೆಗೆ ಹೋಗಿದ್ದಾಗ ಅಲ್ಲಿದ ಬೃಹತ್

ದೇವಾಲಯವನ್ನು ಕಂಡು "ಇದು ಯಾವ ದೇವಾಲಯ" ಎಂದು ಕೇಳಿದಾಗ ಅಲ್ಲಿದ್ದವ ಏನು ಹೇಳಿದ ಗೊತ್ತೆ? "ಇದ್ ವಾದ್ಯಾರ್ ಶೈಲ್ಪ ಪುಳ್ಳೈಯವರಿದ್" ಅಂತ. ಮಧುರೆ ದೇವಾಲಯ ಮಿನಾಕ್ಷಿದೇವಿಯದಲ್ಲ! ವಾದ್ಯಾರದ್.

ಹಾಗೇ ಆವಡಿ ಆಲಯದಲ್ಲಿ ಪ್ರಜಾರಾಜ್ಯದ ಪ್ರಜೆಗಳ ಕೂಟವಲ್ಲ ಸೇರುವುದು! ಪ್ರಜಾಪ್ರತಿನಿಧಿಗಳ ಕೂಟ. ಪ್ರಜಾ ಪೂಜಾರಿಗಳ ಒಡ್ಡೋಲಗ ಎಂದ.

ಕೊರವ ಕಾಂಗ್ರೇಸಿನ ಆಯ್ಕೆಯಲ್ಲಿ ಕೇವಣಾತಿ ಕಳೆದುಕೊಂಡಿದ್ದ ಎಂದು ಆಗ ನೆನಪಾಯ್ತು ನನಗೆ.



ನಾನು ಖುದ್ದಾಗಿ ಒಗೆದು ಇಸ್ತ್ರಿಮಾಡಿಕೊಟ್ಟೆ ನೋಡು!
ಅಧ್ಯಕ್ಷರಾಗಿ ಆಯ್ಕೆ ಆಗಿಯೇಬಿಡ್ತು.

ಅವಿಶ್ವಾಸ......?

(A Sankramika)

...........ರು ಮುನಿಸಿಪಾಲಿಟಿಯ ಅಧ್ಯಕ್ಷನಾದ ಹೆಚ್. ಹೆಚ್. ಪುಟ್ಟ್ರಾಯನಿಗೆ ಮುನಿಸಪಲ್ ಕೌನ್ಸಿಲರ್ ಮೀಸೆ ಮರಿಯಪ್ಪನು ಈ ಮೂಲಕ ತಿಳಿಸುವುದೇನೆಂದರೆ—

ಎಲಾ ಮಗನೆ, ಎಷ್ಟೋ ನಿನಗೆ ಕೊಬ್ಬು. ಸೌದೆ ತರೋಕೆ ಸ್ವಲ್ಪ ಮುನ್ಸಿಪಾಲ್ಟಿ ಲಾರಿ ಕಳಿಸಿಕೊಡೋ ಅಂತ ಕೇಳಿದರೆ ಆಗುಲ್ಲ ಅಂತ ಹೇಳಿಕಳಿಸಿದೀಯ! ಇರಲಿ ನಿನ್ನ ಕೆಳಗಿಳಿಸ್ತೀನಿ ಪ್ರೆಸಿಡೆಂಟ್ ಗಿರಿಯಿಂದ!

ಮೀಸೆಮರಿ,
ಗರಡಿಮನೆ.

....ತಾಲ್ಲೂಕು ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟರಾದ ಕೊಡಲಿರಾಮಯ್ಯನವರಲ್ಲಿ ಹೆಚ್. ಹೆಚ್. ಹುಚ್ಚೂರಾಯನ ಆಗ್ರಹಪೂರ್ವಕವಾದ ವಿಜ್ಞಾಪನೆಗಳು.

ಮೊನ್ನೆ ಮರಾಮತ್ ಮಂತ್ರಿಗಳು ನಮ್ಮೂರಿಗೆ ಬಂದಾಗ, ಟಿ. ಬಿ.ಯಲ್ಲಿ ಅವರಿಗೆ ಹಾರಹಾಕಿ ನಿಂಬೆಹಣ್ಣು ಕೊಟ್ಟು ಅವರ ಕಿವಿಯಲ್ಲಿ ರಹಸ್ಯವಾಗಿ ಹೇಳಿದ ಸಮಾಚಾರ ಊರಿನಲ್ಲೆಲ್ಲ ಪುಕಾರಾಗಿಹೋಗಿದೆ. ನೀವು ಮಂತ್ರಿಗಳಿಗೆ ನಯವಾಗಿ ಅರಿಕೆಮಾಡುಕೊಳ್ಳುತ್ತಿದ್ದಾಗ ನಮ್ಮ ಸೀನಿ ಬಾಗಿಲ ಹಿಂದೇನೇ ನಿಂತುಕೊಂಡು ಎಲ್ಲಾನೂ ಕೇಳಿದನಂತೆ. ಅವನು ಅಮುಲ್ದಾರ್‌ರಿಗೆ ಯಥಾವಿಧಿಯಾಗಿ ವರದಿ ಒಪ್ಪಿಸಿದಾನೆ. ಅಮುಲ್ದಾರರನ್ನು "ಶುದ್ಧ ಪೋಕರಿ" ಅಂತ ಮಂತ್ರಿಗಳಿಗೆ ನೀವು ಹೇಳಿದ್ದು ಮಹಾಪರಾಧ. ಅಮುಲ್ದಾರರು ನಮ್ಮನ್ನೆಲ್ಲ ಮನೆಗೆ ಕರಸಿಕೊಂಡು ಸಮಜಾಯಿಶಿಕೊಟ್ಟರು. ಗುಂಜೇಗೌಡರನ್ನೇ ಅಧ್ಯಕ್ಷಗಿರಿಗೆ ಏರಿಸುತ್ತೇವೆ. ಮ್ಯಜಾರಿಟಿ ನಮ್ಮದೇ. ರಾಜಿನಾಮೆ ಕೊಡುವುದಾದರೆ ಕೊಟ್ಟುಬಿಡಿ. ಭಗವಂತನು ನಿಮಗೆ ಆದಷ್ಟು ಬೇಗ ಕೇಡನ್ನುಂಟುಮಾಡಲಿ. ಇತಿ,

ನಿಮ್ಮ ಅಜನ್ಮ ಶತ್ರು
ಹೆಚ್. ಹೆಚ್. ಹುಚ್ಚೂರಾಯ.

ಶ್ರೀಯುತ ರಾ. ಪು. ಕಾಂ ಸ. ಅಧ್ಯಕ್ಷರಾದ...... .... ರಲ್ಲಿ ಪಕ್ಷದ ಸದಸ್ಯನಾದ ಕೊಡಲಿರಾಮಯ್ಯನ ವಿಜ್ಞಾಪನೆಗಳು. ಕಳೆದವರ್ಷ ಅಧ್ಯಕ್ಷ ಚುನಾವಣೆ ಯಲ್ಲಿ ನೀವು ಇತ್ತ ಭರವಸೆಯಮೇಲೆ ನಾನು ನನ್ನ ಉಮೇದುವಾರಿಕೆಯನ್ನು ವಾಪಸ್ ತೆಗೆದುಕೊಂಡೆ. ನಾನು ನಿಮಗೆ ಪ್ರತಿಸ್ಪರ್ಧಿಯಾಗಿ ನಿಂತುಕೊಂಡಿದ್ದರೆ ಮಂಗಯ್ಯನೇ ಅಧ್ಯಕ್ಷಸ್ಥಾನಕ್ಕೆ ಏರುತ್ತಿದ್ದ ಮಂಗಯ್ಯನಿಗೂ ಬೂದಿ ಎರಚಿ ಬಾಯಿಗೆ ಬೀಡಿ ತುರಿಕಿದಿರಿ. ಪ್ರವಾಹ ಪರಿಹಾರನಿಧಿ ಶೇಖರಣೆಯ ರಸೀತಿಪುಸ್ತಕ ಗಳನ್ನಾದರೂ ಅವನಿಗೆ ಕೊಟ್ಟಿರಿ ಅದರಲ್ಲಿ ಅರ್ಧ ನನಗೆ ಕೊಟ್ಟಿದ್ದರೂ ಸಾಕಾಗಿತ್ತು. ಅದೂ ಬೇಡ. ರಂಢೋಲ್ ರಂಗಣ್ಣನ ಅಳಿಯನಿಗೆ ಶಿಫಾರಸುಮಾಡಿ ಒಂದು ಪ್ರೊಬೇಷನರಿ ಕೊಡಿಸಿದರಲ್ಲ, ನನ್ನ ಅಳಿಯ ಏನಾಗಿದ್ದ? ರಂಗಣ್ಣನ ಅಳಿಯನಂಥ ಕೇಡೀಗೆ ನೀವು ಬರೆದುಕೊಟ್ಟಿರುವ ಶಿಫಾರಸು ಪತ್ರವೊಂದೇ ಸಾಕು ನಿಮ್ಮನ್ನು ಕೋರ್ಟಿಗೆಳೆಯುವುದಕ್ಕೆ! ಅವನು ಸದಾಕಾಲವೂ ಪೋಲೀಸ್ ಯೂನಿಫಾರಂನ್ನೇ ಹಾಕಿಕೊಂಡು ತಿರುಗಾಡುವುದರ ಗುಟ್ಟು ಗೊತ್ತೋ? ಅವನು ಆ ಉಡುಪು ಬಿಚ್ಚಿದ ಸಮಯದಲ್ಲಿ ಜನ ಏನಾದರೂ ಅವನನ್ನು ನೋಡಿದರೆ, ಅವನೇ ಕೇಡಿ ಅಂತ ಹಿಡಿದು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡುಹೋಗುತ್ತಾರೆ. ಇರಲಿ, ಇದನ್ನೆಲ್ಲ ಬಹಿರಂಗ ವಾಗಿ ಹತ್ತಾರುಜನಕ್ಕೆ ಗೊತ್ತಾಗುವಹಾಗೆ ಪ್ರಚುರಪಡಿಸಬೇಕೇ ಹೊರತು, ನಿಮಗೇ ಗುಟ್ಟಾಗಿ ಈ ಕಾಗದದಲ್ಲಿ ಬರೆದರೆ ಲಾಭ ಏನು? ಮುಖ್ಯವಾಗಿ ನೀವು ಅಧ್ಯಕ್ಷರಾಗಿ ರುವುದು ನನಗೆ ಸುತರಾಂ ಇಷ್ಟವಿಲ್ಲ. ನಿಮ್ಮನ್ನು ಅಧ್ಯಕ್ಷಪೀಠದಿಂದ ಇಳಿಸುವುದಕ್ಕೆ ಏನೇನು ಮಾಡಬೇಕೋ ಅದೆಲ್ಲವನ್ನೂ ಮಾಡುತ್ತಿದೇನೆ. ಮುಂದಿನ ತಿಂಗಳು ಪಾರ್ಟಿ ಮೀಟಿಂಗ್‌ನಲ್ಲಿ ಅವಿಶ್ವಾಸನಿರ್ಣಯ ಮಂಡಿಸುತ್ತೇನೆ.

ಇತಿ, ನಿಮ್ಮ ತೇಜೋವಧೆಯನ್ನು ಎದುರುನೋಡುತ್ತಿರುವ,

ಕೊಡಲಿರಾಮಯ್ಯ.

ಶ್ರೀಯುತ, ಮುಖ್ಯಮಂತ್ರಿಗಳಾದ.... . ...ಗೆ,

ರಾ. ಪು. ಕಾಂ. ಸ ಅಧ್ಯಕ್ಷನಾದ ನಾನು ಕಟ್ಟಕಡೆಯದಾಗಿ ಈ ವಿಶ್ವಾಸ ಪೂರ್ವಕ ಪತ್ರದಮೂಲಕ, ನಿಮ್ಮ ನಾಯಕತ್ವದಲ್ಲಿ ಅವಿಶ್ವಾಸ ಸೂಚನೆಯನ್ನು ಸ್ಪಷ್ಟಪಡಿಸದೆ ಗತ್ಯಂತರವಿಲ್ಲ ಅಧಿಕಾರಕ್ಕೆ ಬಂದಮೇಲೆ ನಮ್ಮನ್ನೆಲ್ಲ ಚೆನ್ನಾಗಿ ನೋಡಿಕೊಳ್ಳುತ್ತೀರೆಂಬ ಭರವಸೆಯಮೇಲೆ ನಿಮಗೆ ನಾಯಕಪಟ್ಟ ಕಟ್ಟಿ ಮಹಡಿ ಹತ್ತಿಸಿದೆವು. ಅಧಿಕಾರ ಬಂದಮೇಲೆ ನೀವು ನಮ್ಮ ಅಶೋತ್ತರಗಳನ್ನು ಸಂಪೂರ್ಣ ವಾಗಿ ಮರತು ಊರೂರು ತಿರುಗಹತ್ತಿದಿರಿ. ಹೊಳೆ ದಾಟಿದಮೇಲೆ ಅಂಬಿಗ........ ತಾನೇ! ನಮಗೂ ವಯಸ್ಸಾಗುತ್ತ ಬಂತು. ಇದೇರೀತಿ ಇನ್ನೂ ಹಲವಾರು ಬೆಂಬಲಿಗರು ನಿರಾಶೆಗೊಂಡು ರೊಚ್ಚಿದ್ದಿದ್ದಾರೆ. ಭೂದಾನ, ಶ್ರಮದಾನ, ಬುದ್ಧಿದಾನ ಮಾಡುತ್ತಿರುವ ಕಾಲದಲ್ಲಿ ಅಧಿಕಾರದಾನಮಾಡಿ ಪುಣ್ಯಕಟ್ಟಿಕೊಳ್ಳುವ ಸದವಕಾಶ

ವನ್ನು ದೇವರು ನಿಮಗೆ ಕೊಟ್ಟಿದ್ದಾನೆ. ಆದುದರಿಂದ ನಾನು ಮೊಗುಂ ಆಗಿ ನಿಮಗೆ ಈಗ ಹೇಳುವುದಿಷ್ಟೆ ತಡವಾದದ್ದು ಆಯಿತು. ಈಗಲಾದರೂ ಮಂತ್ರಿಮಂಡಲವನ್ನು ಪುನರ್ರಚಿಸುವ ಯೋಚನೆಮಾಡಿ. ಕೇವಲ ನಾಲ್ಕೈದು ಜನರನ್ನೇ ಐದುವರ್ಷಗಳೂ ಪೂರ್ತಿಯಾಗಿ ಮಂತ್ರಿಗಳನ್ನಾಗಿಟ್ಟಿರುವುದು ನಮ್ಮ ದೇಶದ ಇಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಕ್ಷೇಮವಲ್ಲ. ನಮ್ಮ ದೇಶದ ಸರ್ಕಾರ ಪ್ರಜಾಪ್ರಭುತ್ವದ ಮಾದರಿ ಎಂಬುದನ್ನು ಈಗಲಾದರೂ ಜ್ಞಾಪಿಸಿಕೊಂಡು ಹೊಸಬರಿಗೆ ಅವಕಾಶ ನೀಡುವ ಯೋಚನೆಮಾಡಿ. ಮಂತ್ರಿಗಳ ಸಂಖ್ಯೆಯನ್ನು ನಾನು ಹಿಂದೆಯೇ ತಿಳಿಸಿದ್ದಂತೆ .. ..ಕ್ಕೆ ಹೆಚ್ಚಿಸದೆ ಸಾಧ್ಯವೇ ಇಲ್ಲ. ಅಷ್ಟೇ ಜನ ಡೆಪ್ಯುಟಿ ಮಿನಿಸ್ಟರುಗಳನ್ನು ನೇಮಕಮಾಡುವುದು ಅತ್ಯಗತ್ಯ. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನೆಂಬುದನ್ನು ಇನ್ನೊಂದುವಾರ ಕಾದು ನೋಡಿ, ಅಲ್ಲಿಗೂ ನೀವು ಬಗ್ಗದೆಹೋದರೆ ನಿಮ್ಮಮೇಲೆ ಅವಿಶ್ವಾಸ ನಿರ್ಣಯವನ್ನು ತರುವ ಏರ್ಪಾಟನ್ನು ಕೈಗೊಳ್ಳುತ್ತೇನೆ. ಅವಿಶ್ವಾಸ ಸೂಚನೆಗೆ ಎಡೆಕೊಡುವುದಿಲ್ಲವೆಂದು ನಂಬಿರುವ,

ನಿಮ್ಮ ಅನ್ಯೋನ್ಯವಿಶ್ವಾಸಿ,

....,.....................

ರಾಜೀವಪುರ.

— ಹಾ. ರಾ. ರಾಜೀವಪುರ.

ಹಾದಿಯಲ್ಲಿ ಕೇಳಿಸಿದುದು

"ಅದು ಸರೀಪ್ಪಾ – ಈ ಮಂತ್ರಿಗಳನ್ನ ಹೆಂಗಾದ್ರೂ ಸುಧಾರಿಸಬೋದು. ಅವರ್ಜೊತೇಲಿ ಬರೋ ಅಧಿಕಾರಿಗಳನ್ನೂ ಸುಧಾರಿಸಬೋದು. ಅವರು ಅಧಿಕಾರ ಚಲಾಯ್ಸಿದ್ರೂ ಸಹಿಸ್ಕೋಬೋದು. ಆದ್ರೆ ಆ ಮಂತ್ರಿಗಳು ಎಲ್ಲೋಗ್ಲಿ ಅವರಿಗೆ ಗೋದಂಟ್ಕೊಂಡಂಗಂಟ್ಕೊಂಡಿರ್ತಾರಲ್ಲ – ಆ ಮಂತ್ರಿಗಳ ಬಂಧು ಬಳಗ – ಅವರ ಜಬರದಸ್ತೀನ ತಡಿಯೋದು ನಮ್ಕಿಂದ ಅಸಾಧ್ಯ – ಶುದ್ಧ ಅಸಾಧ್ಯ!"

—ಅಯ್ಯೋ – ನಿಮ್ಕಿಂದೇನ್ರೀ? – ಆ ಜಬರದಸ್ತೀನ ತಡಿಯೋದು ಅಧಿಕಾರಿಗಳಿಂದ್ಲೂ ಅಸಾಧ್ಯ ಗೊತ್ತೇ....?

—"ಶೇಷ"

ಯಮನ ಸೋಲು

[ಕೊ. ನಂ. ರ, ಕ್ಷಮೆ ಬೇಡಿ]

ಹಿಂದೊಮ್ಮೆ ಹೇಳಿದ್ದೆ ನಿಮಗೆಲ್ಲ ಈ ಕಥೆಯ
ಅಂದೊಮ್ಮೆ ಯಮಧರ್ಮ ನರನೆದುರು ಸೋಲೊಪ್ಪಿ
ನಾಕಕ್ಕೆ ಹಿಮ್ಮೆಟ್ಟಿ ಮೌನದಿಂ ಕೊರಗಿದ್ದ—
ಆ ಕಥೆಯ ಮತ್ತೊಮ್ಮೆ ಪೇಳಿ ಮನಸಾಯ್ತು.

ಸತ್ಯವಾನ್ನಚಿಕೇತ ಮಾರ್ಕಂಡುಗಳ ನೆನಪು
ನಿತ್ಯಕೂ ದುಸ್ಸ್ವಪ್ನ – ಯಮನದನೆ ಮರೆತಿದ್ದ!

ತಾತಯ್ಯ ನರಳುತ್ತ ಮಲಗಿದ್ದ ಕೋಣೆಯಲಿ
ಸುತ್ತಲೂ ನೆರೆದಿತ್ತು ನೆಂಟರಿಷ್ಟರ ತಂಡ
ಶ್ವಾಸವದು ಉಬ್ಬುತ್ತ ತಗ್ಗುತ್ತಲೇರುತ್ತ
ಭುಸಭುಸನೆ ಹೂಂಗುಟ್ಟಿ ನಿಲ್ಲುತ್ತ ಚಿಮ್ಮುತ್ತ
ನೆಂಟರಿಷ್ಟರನೆಲ್ಲ ಶೋಕದಲ್ಲಿ ನೆನೆಸಿತ್ತು—
ಭಂಟರೆಲ್ಲರನಲ್ಲೆ ಕಂಬನಿಯಲದಿಮಿತ್ತು.

ವೈದ್ಯರೊಬ್ಬರನಾಗ ಕರೆತಂದು ತೋರಿಸಲು
ಸಾಧ್ಯವಾದುದನೆಲ್ಲ ಮಾಡಲವರೊಪ್ಪಿದರು.
ತಮ್ಮ ಕಿಸೆಯಲ್ಲಿದ್ದ ಔಷಧಾಯುಧಗಳನೆ
ಒಮ್ಮೆಲೇ ಹೊರತೆಗೆದು ಕಾರ್ಯದಲಿ ತೊಡಗಿದರು.

ಅಗೊ! ಮತ್ತೊಬ್ಬ ವ್ಯಕ್ತಿ ಧಾವಿಸಿದನೆಲಾ!
ಹೇಗವನು ಬಂದನೋ! ಎಲ್ಲಿಂದ ಬಂದನೋ!
ಯಾರವನು? ಎಲ್ಲಿಯವ? ಇಲ್ಲೇಕೆ ಬಂದನವ?
ಅರಿವಿಲ್ಲ ಯಾರಿಗೂ ಸಕಲರಿಗು ಹೊಸಬನವ
ನೋಡೆ ಭೀಮಾಕಾರಿ ಕಣ್ಗಳವು ಅಗ್ನಿಮಯ
ನಡುಗೆಯಲ್ಲಿ ಗುಡುಗು ಸಿಡಿಲಿನ ಬೆಡಗು!

ಇತ್ತ ತಾತಯ್ಯನ ಕೂಗು ಗಗನಕೇರಿತ್ತು
ಹತ್ತಿರದಲ್ಲಿದ್ದವರು ತತ್ತರಿಸಿ ನಡುಗಿದರು!

ಹೊಸವ್ಯಕ್ತಿ ಬಂದೊಡಂ ಪಾಶವಂ ತೋರಿಸಲು
ಹಾಸುಗೆಯ ಕಚ್ಚುತ್ತ ಹಿಡಿದನಾ ರೋಗಿ.

ಇದನೋಡಿ ಆ ವೈದ್ಯನಾಕ್ಷಣವೆ ತಾತಯ್ಯನ
ಹೃದಯದಲಿ ಕಿಂಚಿತ್ತು ಬಲವಿಲ್ಲವೆಂದೆಣಿಸಿ
ಸೂಜಿಯಂ ಸರಿಪಡಿಸಿ ಧೈರ್ಯವನೆ ಹೇಳುತ್ತ
ಸೋಜಿಗವ ಮಾಳ್ಪೆನೆಂದೆಲ್ಲರಿಗೂ ಸಾರುತ್ತ
ಕೊಟ್ಟನಲ! – ಸೂಜಿಯಿಂ ರಕ್ತಕ್ಕೆ ಔಷಧಿಯ!

ಕೆಟ್ಟನಲ! – ಪಾಶವಂ ಬೀರಿದ್ದ ಯಮಧೂತ!
ಕಣ್ಣಿನಲಿ ಬೆಂಕಿಯನು ಕಾರುತ್ತ ನೋಡುತ್ತ
ಮಣ್ಣಿನಲಿ ಕೆಸರಿನಲಿ ಹಳ್ಳದಲ್ಲಿ ತಟ್ಟಿನಲಿ
ಬೀಳುತ್ತ ಏಳುತ್ತ ಕಿತ್ತನಲ ಕಂಬಿಯಂ!
ಹಾಳಾದ ವೈದ್ಯನನು ಛೀಮಾರಿ ದೂರುತ್ತ
ಯಮಧರ್ಮನಡಿಮೇಲೆ ಉಬ್ಬಸದಿ ಬಿದ್ದನವ—
"ಎಮಗಿಂತ ನರರಿಂದು ಶಕ್ತ"ರೆಂದ್ಹೇಳುತ್ತ.

ಯಮರಾಯ ಕಣ್ತೆರೆದು ಕಿಂಕರನ ದೃಷ್ಟಿಸಿದ.
ಕ್ರಮವಾಗಿ ಎಲ್ಲವನು ಒದರೆಂದು ಘರ್ಜಿಸಿದ
ಬೆವರುತ್ತ ನಡಗುತ್ತ ತೊದಲುತ್ತಲಾಧೂತ
ಅವಗಾದ ಅವಮಾನ, ಪಾಶಕ್ಕೆ ಧರ್ಮಕ್ಕೆ
ನಾಕಕ್ಕೆ ಸಗ್ಗಕ್ಕೆ ವೈದ್ಯರೆಂಬರ ಸಂಚು
ಲೋಕದಲಿ ಯಮರಾಯ ಯಮಧೂತ ಯಮಲೋಕ
ಇವಕೆಲ್ಲ ಸೋಲಾಗಿ ನರನೆಂಬ ಅಣು ಒಬ್ಬ
ದೇವತೆಗೆ ಸಮನಾಗಿ ಎದೆತಟ್ಟಿ ನಿಂತನಲ!
ಎಂದೆಲ್ಲ ಆ ಧೂತ ರಾಜಸಮ್ಮುಖದಲ್ಲಿ
ಬಂದವನೆ ವರದಿಯಂ ರವರವನೆ ಒಪ್ಪಿಸಿದ.

ಮೋಡಗಳು ಸಿಡಿಲಿದವು! ಯಮಲೋಕ ತಲ್ಲಣಿಸೆ
ಅಡವಿಯೋ ಮೇಲೆಂದು ಗೋಣಾಗಿದರು ಯಮಭಟರು
ತಾಳಲಾರದೆಪೋದರೈ ಯಮಧರ್ಮನಬ್ಬರವ!
ಕೇಳೆ ಕರ್ಣಕಠೋರ ಧರ್ಮನಂ ಕೆಣಕಿದೊಡೆ!

ಯಮರಾಜ ದೀರ್ಘವಾಗುಸಿರನ್ನು ಹೀರುತ್ತ
ಹಿಮವನೇ ಕುದಿಸುತ್ತ ಕೋಪಾಗ್ನಿ ಜ್ವಾಲೆಯಿಂ

ಗದೆಯನ್ನು ಬೀಸುತ್ತ ಆರ್ಭಟಿಸಿ ಘರ್ಜಿಸಿದ—
"ಮದವೇರಿ ಕೊಬ್ಬಿರುವ ಲೋ ಕತ್ತೆಗಳಿರಾ—
"ಏನೆಂದು ತಿಳಿದಿರೀ ಧರ್ಮದ ವ್ಯಾಪಾರ?
"ಮನುಜರಿಗೆ ಹೆದರಿ ನಾವ್ ದೌಡೋಡುವುದಕಿಂತ
"ಮನೆಮಠವ ಬಿಟ್ಟೋಡಿ ಕಾಡಸೇರ್ವುದು ಲೇಸು
"ದಿನದಿನಕು ನಿಮ್ಮಿಂದ ಮೂರ್ಖತನವೇರುತಿದೆ
"ನಿಮಗೆಂದು ಫಲವೇನು? ಆಳುವಾಡುವುದ್ಹಾಳು!
"ಶ್ರಮಜೀವಿ ಕೋಣನಾದರು ಲೇಸುಮಾಡುತಲಿತ್ತು
"ತನ್ನಿರೋ ಪಾಶವನು! ಕರೆಯಿರೋ ಕೋಣನನು!
"ಕುನ್ನಿ ಆ ನರಜೀವನೀಕ್ಷಣವೆ ನಾ ತರುವೆ—
"ಕಾಯಿಸಿರೊ ಎಣ್ಣೆಯನು - ಅಗ್ನಿದೇವಗೆ ಹೇಳಿ!
"ಬಾಯಿಮಾತಲ್ಲವೀ ಯಮರಾಜ್ಯದಾಡಳಿತ"

ಎಂದೆನುತ ಮುಷ್ಟಿಯಿಂ ಪಾಶವನೆ ಬಿಗಿಹಿಡಿದು
ಮುಂದಿದ್ದ ಕೋಣನಂ ಪ್ರೇಮದಿಂ ತಟ್ಟುತ್ತ ಏರುತ್ತ
ದುಡುಕಿನಲಿ ಮರೆತಿದ್ದ ಖಡ್ಗ ಗದೆಗಳನ್ನು ತಾನ್
ಸಡಗರದಿ ಧೂತರಿಂ ತರಿಸಿ ಹಸ್ತದಿ ಹಿಡಿದು
ಮಿಂಚಿನಂತೋಡಿಸಿದ ವಾಹನವ - ಮಾನವನ
ಸಂಚಿನಿಂದುಬ್ಬಿದೀ ಧರೆಗಿಳಿದು ಧಾಳಿಸಿದ.

ಇಳಿದವನೆ ತಾತಯ್ಯ ಗೃಹಮುಂದೆ ನಿಲ್ಲದೆಲೆ
ಒಳಹೊಕ್ಕ ರೋಷದಿಂ ಕೋಣನನು ನುಗ್ಗಿಸುತ.
ಬೆರಗಾದ - ಅಲ್ಲಿದ್ದ ವೈದ್ಯನಂ ತಾ ಕಂಡು!


ಅರೆಘಳಿಗೆ ಯೋಚಿಸಿದ - ಎಲ್ಲಿಯೋ ಕಂಡ ಮುಖ!
ಅಹುದಹುದು - **ಹಿಂದೊಮ್ಮೆ ಯಮನ ಕಿಂಕರನಾಗಿ**
ಸಹಜದಲಿ ಸೇವೆಯೆಂ ಸಲ್ಲಿಸಿದ್ದಾತನೇ
ಈಗಿಲ್ಲಿ ವೈದ್ಯನಾಗಿಹೆನಲಾ! - ಎನ್ನುತ್ತ
ಬಾಗಿಲಲೆ ಕೋಣನಂ ಹಿಡಿದೆಳೆದು ನಿಲ್ಲಿಸಿದ.

ಗೆಜೆಟಿಡ್ದು ಕಿಂಕರಗೆ ಕಟುಶಿಕ್ಷೆಯನುವಿಧಿಸಿ
ಗೆಜೆಟಿಂದ ಹೊರದೂಡಿ ವೈದ್ಯನಂಮಾಡಿದ್ದು!

ಮೆಲ್ಲಹೆಜ್ಜೆಯನಿಡುತ ವೈದ್ಯನಿದ್ದೆಡೆ ಪೋಗಿ
ಹಲ್ಲುಗಳ ಕಿರಿಯುತ್ತ ಯಮರಾಜನಿಂತೆಂದ—

“ ಕ್ಷಮಿಸೆನ್ನ ಹೇ ಮಿತ್ರ – ತಪ್ಪೆನ್ನದೋ, ನಾ ಸೋತೆ—
“ ಆ ಮೂರ್ಖ ಚಿತ್ರಗುಪ್ತನ ಕಾರ್ಯವೆಂದಿಗೂ ಹಾಳು!
“ ಅವ ನಿನ್ನ ಗುರುತಿಸದೆ ಇಂತೆಲ್ಲ ಕಷ್ಟಕೂ
“ ಅವಕಾಶವಿತ್ತು, ತಾ ಧರ್ಮವನೆ ಮುಳುಗಿಸಿದ.
“ ಎನ್ನ ಕೆಲಸವನೆಲ್ಲ ತಪ್ಪದೆಲೆಮಾಡುತ್ತ
“ ನೀನೆ ಇಲ್ಲಿರುವಲ್ಲಿ ಯಮಲೋಕ ಕ್ಷೇಮ.
“ ನಿನಗೆ ಶುಭವಹುದು – ಕಾರ್ಯವನೆ ಮುಂದರಿಸು
“ ನಾನೀಗ ಪಿಂತಿರುಗಿ ಎಣ್ಣೆಯಂ ಕುದಿಸಿಡುವೆ”
ಎಂದೆನುತ ಯಮರಾಜ ಕೋಣನಂ ತಿರುಗಿಸುತ
ಬಂದ ದಾರಿಯು ಹಿಡಿದ – ಸುಂಕವೇನಿಲ್ಲೆನುತ.

— “ಕೇಫ”



ಜನವರಿ ಮೊದಲನೆ ತಾರೀಖಿಗೇ ಬರುತ್ತೆ ನೋಡಿ! ನಮ್ಮ ತಂದೆಯವರ ಶ್ರಾದ್ಧ! ಒಂದುದಿನ ರಜಾ ಅನ್ಯಾಯವಾಗುತ್ತೆ!

ಕರ್ಣಾಟಕದ ಕಾಣಿಕೆ

ಮುಗಿಲು ಹಳ್ಳಿಯ ಮಹಾನುಭಾವರ ಮಠದಲ್ಲಿ ಆಚಾರ್ಯ ಅರಾಸೆಯವರು ಮಾಡಿದ ಸಂಸ್ಕೃತಿಪ್ರಹಾರ ಭಾಷಣವನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಮಹಾನುಭಾವ ಭಾವೆಯರೇ,

ಮಹತ್ ವಿಶ್ವದ ಸಾಹಿತ್ಯ, ಸಂಸ್ಕೃತಿ, ಶಿಲ್ಪ, ಸಂಗೀತ ರಾಜನೀತಿ, ವಿಜ್ಞಾನ, ಅನುಭಾವಗಳಿಗೆ ಕರ್ಣಾಟಕದ ಕಾಣಿಕೆಯೇನು ಎಂಬುದಾಗಿ ಈ ಹಿಂದೆ ಒಂದು ವಾರದಿಂದಲೂ ಕೇಳಿದ್ದೀರಿ. ಈಗ ನಾವೆಲ್ಲರೂ ಮತ್ತೆ ಸೇರುವುದು, ನನ್ನ ಮಿತ್ರ ರೊಬ್ಬರು ಹೇಳಿದಂತೆ, ಒಂದು ಹೆಮ್ಮೆಯ ವಿಷಯ. ನನ್ನ ಜಿಜ್ಞಾಸೆಯನ್ನು ಕೇಳಲು ಬಂದಿರುವುದು ನನ್ನ ನಿಮ್ಮ ದುರ್ದೈವ.

ಕರ್ಣಾಟಕವು ಎಲ್ಲ ದಿಸೆಗಳಲ್ಲೂ ವಿಶ್ವಕ್ಕೆ ತನ್ನ ಕಾಣಿಕೆಯನ್ನು ಸಲ್ಲಿಸಿದ್ದರೂ ನಾನಿಂದು ಹೇಳಲಿರುವ ಕ್ಷೇತ್ರದಲ್ಲಿ ಅದರ ಕಾಣಿಕೆ ಅಭೂತಪೂರ್ವವಾದುದು, ಅತ್ಯದ್ಭುತವಾದುದು, ವಾಚಾಮ ಗೋಚರವಾದುದು. ಕರ್ಣಾಟಕದ ಗತವೈಭವ, ವಿಜಯನಗರ ಸಾಮ್ರಾಜ್ಯ, ಇತ್ಯಾದಿಯಾಗಿ ಚಿಂತಿಸಿ ನೀವು ಖಿನ್ನರಾಗದಿರಿ. ಈಗಲೂ ವಿಶ್ವಕ್ಕೆ ಕರ್ಣಾಟಕದ ಕಾಣಿಕೆ ಅತಿಹೆಚ್ಚಿನದು. ಅನುಭಾವ ಮಾರ್ಗಗಳಲ್ಲಿ ಕರ್ಣಾಟಕಕ್ಕೆ ಒಂದು ಗಣ್ಯಸ್ಥಾನವಿದೆ. ಅಲ್ಲಿ ಅದರ ಕಾಣಿಕೆ ಶ್ರೇಷ್ಠತರವಾದುದು; ಸಂಶಯವಿಲ್ಲ ಆದರೆ ಅಭಾವಮಾರ್ಗದಲ್ಲಿ ಕರುನಾಡು ಇನ್ನುಳಿದ ಹಿರಿನಾಡುಗಳನ್ನು ಮೆಟ್ಟಿಬಿಟ್ಟಿದೆ. ಈ ಕ್ಷೇತ್ರದಲ್ಲಿಯೇ ಅದರ ಶ್ರೇಷ್ಠತಮ ಕಾಣಿಕೆ ಸಂದಿದೆ. ಮೊದಲನೆಯದಾಗಿ ಕನ್ನಡಮ್ಮನ ಮಕ್ಕಳಾದ ನೀವೆಲ್ಲರೂ ನನ್ನ ಭಾಷಣವನ್ನು ಕೇಳಲು ಬಂದಿರುವುದು ನಿಮ್ಮಲ್ಲಿರುವ ಬುದ್ಧಿಯ ಅಭಾವವನ್ನು ಸೂಚಿಸುತ್ತಿದೆ.... (ಭಯಂಕರ ಚಪ್ಪಾಳೆ)

ಕರ್ಣಾಟಕಕ್ಕೆ ಪ್ರಾಂತ್ಯಾಭಾವ, ಕನ್ನಡ ಪ್ರದೇಶಭಾಷೆಗಳಲ್ಲಿ ಏಕಮುಖತೆಯ ಅಭಾವ.

ಕನ್ನಡಿಗರಿಗೆ ಅನ್ನವಿಲ್ಲ, ಬಟ್ಟೆಯಿಲ್ಲ, ರೊಕ್ಕ ಕೈಯೊಳಗಿಲ್ಲ ಹುರುಡು ಮೈಯೊಳಗಿಲ್ಲ, ಶೇಷಾದ್ರಿ ಸಮಿತಿಯು ಅದ್ಭುತಕಾರ್ಯ ಮಾಡೀತೆಂದು, ಹೆಮ್ಮೆ ಯಿಂದಿದ್ದು ನಾವು ದೆಸೆಗೆಟ್ಟಿವಲ್ಲ?

ನಮಗೆ ಭಾಷಾಭಿಮಾನಕ್ಕೆ ಅಭಾವ....ಶ್ರೋತೃಗಳೇ ಬಿಟ್ಟಿರುವ ಸ್ಥಳವನ್ನು ಭರ್ತಿಮಾಡಿ.

ಜೇನುಸುರಿವ ಹಾಲು ಹರಿವ ದಿವಂ ಭೂಮಿಗಿಳಿದುದೇ ಎಂದು ಕನ್ನಡ ಕವಿಯೊಬ್ಬ ಉದ್ಗರಿಸಿದ. ಆಗ ಆತನಿಗೆ ವಾಸ್ತವ ಪ್ರಜ್ಞೆಗೆ ಅಭಾವವಿದ್ದಿರಬೇಕು. ಕರ್ಣಾಟಕದಲ್ಲಿ ನಾಯಕತನಕ್ಕೆ ಅಭಾವ. ನಾಯಕರುಗಳಿಗೆ ಅಭಾವವಿಲ್ಲದಿರಬಹುದು, ಅದು ಗಣನೀಯವಲ್ಲ. ಕರ್ಣಾಟಕದಲ್ಲಿ ಅಭಾವದ ಸಾರ್ವತ್ರಿಕ ಸುಗ್ಗಿ ಸೂರೆಯಾಗುತ್ತಿದೆ.

ಕವಿಗಳಿಗೆ ಸ್ಫೂರ್ತಿಯಿಲ್ಲ; ಹಣವಿಲ್ಲ. ವಾಚಕರಿಗೆ ಕವಿಗಳ ಅಭಾವ. ಪ್ರ. ಶೀ. ಕಾ, ಕೆ. ಹೊ, ನವ್ಯಕಾವ್ಯ ಬರೆಯುವವರು ಬೇಕಾದಷ್ಟು ಆದರೆ ಅವುಗಳಲ್ಲಿ ಹುರುಳಿಗೆ ಅಭಾವ. ವ್ಯಾಪಾರಿಗಳಿಗೆ ಲಾಭದ ಅಭಾವ. ಕೊಳ್ಳುವವರಿಗೆ ಮಾಲಿನ ಅಭಾವ. ಲಾಯರುಗಳಿಗೆ ಕಕ್ಷಿಗಾರರ ಅಭಾವ.

ಕರ್ಣಾಟಕದಲ್ಲಿ ಬೋಳುಗುಮಟ, ಬೇಲೂರು, ಹಳೆಬೀಡುಗಳನ್ನು ಕಟ್ಟಿದ ಶಿಲ್ಪಿಗಳಿದ್ದರು ಎಂದು ನಿಮಗೆ ತಳಮಳವಾಗುತ್ತಿರಬೇಕು. ಸರ್ ಎಂ. ವಿ. ಯಂಥವರು ಈಗಲೂ ಇರಬಹುದು. ಚಿಂತಿಸಬೇಡಿ. ಇನ್ನಂಥವರು ಹುಟ್ಟಲಾರರು. ತಾಲೂಕಿಗೊಂದು ಎಂಜಿನಿಯರಿಂಗ್ ಕಾಲೇಜು ಹುಟ್ಟುತ್ತಿವೆ. ಇನ್ನು ಕೆಲವೇ ವರ್ಷಗಳಲ್ಲಿ ಶಿಲ್ಪಿಗಳ ಅಭಾವವುಂಟಾಗುತ್ತದೆ. ಆಗ ನಾವು ಹೆಮ್ಮೆಪಡಬಹುದು.

ಒಳ್ಳೆ ಸಿನಿಮ ನಮ್ಮಲ್ಲಿಲ್ಲ. ಒಳ್ಳೆಯ ಶಾಲೆ ನಮ್ಮಲ್ಲಿಲ್ಲ. ಒಳ್ಳೆಯ ಪೋಲೀಸರಿಲ್ಲ, ಒಳ್ಳೆಯ ಕ್ರಿಮಿನಾಶಕಗಳಿಲ್ಲ, ಭೂಪಟ ನಮ್ಮಲ್ಲಿಲ್ಲ, ಬೆಳ್ಳಾರ ಚಿನ್ನದ ಗಣಿ ಮುಚ್ಚಿತು, ಉರಿಗಾಂ ಮರೆಯಾಯ್ತು, ಪಠ್ಯಪುಸ್ತಕಗಳಿಲ್ಲ, ಸಂಗೀತ, ಮಂಗಗೀತೆಯಾಯ್ತು, ಬಸ್ಸುಗಳಿಗೆ ಬ್ರೇಕಿಲ್ಲ, ಕುದುರೆಗಳಿಗೆ ಲಂಗು ಲಗಾಮಿಲ್ಲ, ತಗುಣಿಗಳಿಲ್ಲದ ಥೇಟರಿಗೆ ಅಭಾವ, ಡ್ರೈವರುಗಳಿಲ್ಲದ ಬಸ್ಸುಗಳಿಗೆ ಅಭಾವ. ಕಸ್ತೂರಿ ಮಾತ್ರೆಗಳಿಲ್ಲದ ರೈಲುಗಳಿಲ್ಲ. ರಸ್ತೆಗಳಲ್ಲಿ ಧೂಳಿಗೆ ಅಭಾವವಿಲ್ಲ ಆದರೆ ಸ್ವಚ್ಛತೆಗೆ ಅಭಾವವೆಂಬುದನ್ನು ಗಮನಿಸಿರಿ.

ಕಮಲಗಂಧಿ, ಸರೋಜಾನನೆ, ಲತಾಂಗಿ, ಬೆಡಂಗು ಹೆಣ್ಣುಗಳು ಹಿಂದಿದ್ದರು. ಈಗ ಬೆವರ್ಗಂಧಿ, ಪೌಡರು ಮುಖಿ, ಸಿನಿಮ ಹೆಣ್ಣುಗಳು ಬೇಕಾದಷ್ಟಿದಾರೆ ಆದರೆ ಸೌಂದರ್ಯಾಭಾವ, ಜನಸಂಖ್ಯೆಗೆ ಅಭಾವವಿಲ್ಲ ನಿಜ. ಯುವಕರಿಗೆ ಅಭಾವವಿಲ್ಲನಿಜ. ಆದರೆ ಪೌರುಷ....ಮಹನೀಯರೇ ಅದನ್ನು ಹೇಳಲು ನನಗೆ ಧೈರ್ಯಕ್ಕೆ ಅಭಾವ.

ಹಲಕೆಲವು ಹುಳುಗಳೆನ್ನಿ, ಹಲಕೆಲವು ಹುಚ್ಚುಕುನ್ನಿ
ಕೆಲಕೆಲವು ಹುಚ್ಚುಕುರಿ, ಗಂಡುತನಕೆಲ್ಲಸೊನ್ನಿ.

(ಭಾರೀ ಚಪ್ಪಾಳೆ)

ನಮ್ಮಲ್ಲಿ ವರ್ಣದ್ವೇಷಕ್ಕೆ ಅಭಾವ, ku klux ಕ್ಲಾನ್ ನಮ್ಮಲ್ಲಿಲ್ಲ, ಕೋರ್ಮಿ ಫಾರಮಿಲ್ಲ. ಮಾಂಟೆಕಾರ್ಲ್ಲೊ ಇಲ್ಲ. ಫ್ರೆಂಚ್ ಪಾರ್ಲಿಮೆಂಟಿಗೆ ನಮ್ಮಲ್ಲಿ ಅಭಾವ. ನಮ್ಮಲ್ಲಿ ನಾವೆಗಳಿಲ್ಲ. ನಾವೆಗೆ ಕೂವೆಗಳಿಲ್ಲ. ಕೆಲಸಮಾಡುವವರಿಗೆ ಅಭಾವ. ಮಾಡುವವರಿಗೆ ಕೆಲಸವಿದ್ದರೂ ಆದಾಯಕ್ಕೆ ಅಭಾವ

ಕರ್ಣಾಟಕದಲ್ಲಿ ರಸ್ತೆಗಳಿಗೆ ಅಭಾವ. ಹೋಟೆಲುಗಳಲ್ಲಿ ಒಳ್ಳೆಯ ಕಾಫಿಗೆ ಅಭಾವ. ಕೆರೆ ಕುಂಟೆ ಬಾವಿಗಳಲ್ಲಿ, ಭತ್ತಗದ್ದೆಗಳಲ್ಲಿ ನೀರಿಗೆ ಅಭಾವ. ಹಾರುವ ಹದ್ದುಗಳಿಗೆ ಹಾವುಗಳ ಅಭಾವ.

ಶಾಂತಿಗೆ ಅಭಾವ, ಕ್ರಾಂತಿಗೆ ಅಭಾವ. ಭ್ರಾಂತಿ ಇಲ್ಲದ ಮನುಜರ ಅಭಾವ. ಭಾಷಣಗಳಲ್ಲಿ ವಿಷಯಕ್ಕೆ ಅಭಾವ. ಭೂಷಣವೆಲ್ಲಾ ರೋಲ್ಡ್‌ಗೋಲ್ಡ್, ಸ್ಟೈನ್ ಲೆಸ್‌ಸ್ಟೀಲ್. ಚಿನ್ನ ಬೆಳ್ಳಿಗೆ ಅಭಾವ.

ನಮ್ಮ ಹಳೆಹುಣಸೆಮರಗಳಲ್ಲಿ ದೆವ್ವಗಳಿಗೆ ಅಭಾವ. ಬೀದಿಸಂದುಗಳಲ್ಲಿ ನಾಯಿಗಳಿಗೆ ಅಭಾವ. ಸತ್ತ ಮೀನುಗಳಿಗೆ ಜೀವಕ್ಕೆ ಅಭಾವ. ಸರಾಸರಿ ಸಾಲ ಗಳಿಗೆ ಚಂದಾ ಅಭಾವ.

ವನಮಹೋತ್ಸವದಂದು ನೀರಿನ ಅಭಾವ. ಧ್ವಜದಿನಾಚರಣೆಯಲ್ಲಿ ಭಾಗ ವಹಿಸುವವರಿಗೆ ಅಭಾವ. ಸಂಸ್ಕೃತಿ ಪ್ರಚಾರಕ್ಕೆ, ಛೆ! ಎಂತಹ ಹುಚ್ಚುಮಾತು ಇದ್ದರಲ್ಲವೆ ಅದರ ಪ್ರಸಾರವಾಗುವುದು?

ಅಭಾವವೊಂದನ್ನು ಬಿಟ್ಟು ನಮ್ಮಲ್ಲಿ ಇನ್ನೆಲ್ಲಕ್ಕೂ ಅಭಾವ.

ಎಂಥನಾಡು ನಮ್ಮದು!

"ಗಂಗಾವಾರ್ಧಿಯೊಳಾತ್ಮ ತುರಂಗಮುಮನ್ ಮಿಸಿಸಿದನ್" ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದೆವು ನಾವು. ಇನ್ನೇಕೆ ಆ ಸೀಚತನ?

ಗಂಗಾವಾರ್ಧಿಗೇಕೆ ಹೋಗಬೇಕು. ನಮ್ಮ ಬಡಕಲು ಕುದುರೆ ತಟ್ಟಿಗಾಗಿ ಬನಾರಸನ್ನು ಕಾಣಬೇಕೇ? ನೀರಿನ ಅಭಾವವಿರುವ ನಮ್ಮೂರಿನ ಹೊಂಡದಲ್ಲೇ ಆ ಕುದುರೆಯನ್ ಮಿಸಿಸಿ ಜಟಕಕ್ಕೆ ಕಟ್ಟೋಣ. ನಮ್ಮಲ್ಲಿ ಪರಾಕ್ರಮಕ್ಕೆ ಅಭಾವ ವೆಂದು ಡಂಗುರ ಹೊಯ್ಯೋಣ

ಮಹಾನುಭಾವ ಭಾವೆಯರೇ, ನಕ್ಕು, ನಕ್ಕೂ, ಅಭಾವ ಬ್ರಹ್ಮದಲ್ಲಿ ಲೀನರಾಗಿರಿ.

— ಅ. ರಾ. ಸೇ.

ಜನವರಿ ೧

ಇನ್ನೇನು, ಹೊಸವರ್ಷ ಬಂದೇಬಿಟ್ಟಿತಲ್ಲ! ಹಬ್ಬ ಆಚರಿಸುವುದೆಲ್ಲ ಯುಗಾದಿಯ ದಿನ. ಆದರೆ ಲೌಕಿಕ ವ್ಯವಹಾರಕ್ಕೆ ನಮ್ಮಲ್ಲಿ ಹೆಚ್ಚಿನವರಿಗೆ ಜನವರಿ ಒಂದನೇ ತಾರೀಖು ಯುಗಾದಿಯಂತಿರುತ್ತದೆ.

ಹೊಸ ಕ್ಯಾಲೆಂಡರುಗಳು ಬಂದು, ಗತವರ್ಷದಲ್ಲಿ ಗೋಡೆಯಮೇಲೆ ಮೂಡಿದ ಹೊಸಬಿರುಕುಗಳನ್ನು ಮುಚ್ಚಿ ಮನೆಗೆ ಹೊಸದೊಂದು ಶೋಭೆಯನ್ನು ಉಂಟು ಮಾಡುವಕಾಲ. ಬಂತು ಇನ್ನೇನು, ಹಳೇ ಕ್ಯಾಲೆಂಡರುಗಳಿಗಾಗಿ ಮಕ್ಕಳ ರಂಪಾ ತೊಡಗುತ್ತದೆ. ಕೊಂಚ ಬಲಿತ ಹುಡುಗರ ಚಪಲದಿಂದಾಗಿ ಕೆಲವು ಚಿತ್ರಗಳಂತೂ ಡಿಸೆಂಬರ್ ಅಂತ್ಯದೊಳಗೆ ಗೋಡೆಯಿಂದ ಮಾಯವಾಗಿಬಿಟ್ಟಿರುತ್ತದೆ. ಉಳಿದವುಗಳಿಗಾಗಿ 'ನಂಗೆ ಟೈರು' 'ನಂಗೆ ಶಬರಿ ನೆಶ್ಯ' 'ನಂಗೆ ಜಮದಗ್ನಿ ಬೀಡಿ' ನಂಗೆ ಕರೀಕೋತಿ ತೈಲ'–ಎಂದೆಲ್ಲಾ ಆಯಾಯ ಮಾರ್ಕಿನ ಕ್ಯಾಲೆಂಡರುಗಳಿಗಾಗಿ ಕಿತ್ತಾಟ ನಡೆಯುತ್ತದೆ. ಚಿಕ್ಕದೊಂದು ಪಿಲ್ಟುಕೂಡ 'ನಾಯಿ ಬಿಚ್ಚಿತ್ತೂ' ಎಂದು ಬೊಬ್ಬಿಡುತ್ತದೆ—ನಾಯಿ ಮಾರ್ಕ್ ಬಿಸ್ಕತ್ತಿನ ಕ್ಯಾಲೆಂಡರಿಗಾಗಿ. 'ಬಿಸ್ಕತ್ತೀ ಕೊಡ್ತೀನಿ ಮರಿ' ಎಂದರೂ ಅದು ಜಗ್ಗೋಹಾಗಿಲ್ಲ.

ಜನವರಿ ೧ರ ಹೊತ್ತಿಗೆ ಮನೆ ತುಂಬಿಸಿಕೊಳ್ಳುವ ಇನ್ನೊಂದು ವಸ್ತುವೆಂದರೆ ಡೈರಿ. ನಾಲ್ಕೋ ಆರೋ ಎಲ್ಲೆಲ್ಲಿಂದಲೋ ಬಂದು ಕೂಡುತ್ತವೆ. ದೊಡ್ಡದಾಗಿ ನಾಜೂಕಾಗಿದ್ದ ಒಂದನ್ನು ಸ್ವಂತಕ್ಕಿಟ್ಟುಕೊಂಡು ಉಳಿದವುಗಳನ್ನು ಋಣವಿದ್ದವರಿಗೆ ಕೊಟ್ಟು ಕೃತಾರ್ಥರಾಗುವುದಾಯಿತು. ಅನಂತರ ಸ್ವಂತದ ಡೈರಿಯನ್ನು ತೆರೆದು ನೋಡಿದರೆ ಅದರಲ್ಲಿ ಬ್ಯಾಂಕ್ ಎಕೌಂಟು, ರೇಡಿಯೋ ಲೈಸನ್ಸು, ವಾಚು, ಇನ್ಶೂರೆನ್ಸ್ ಪಾಲಿಸಿ—ಹೀಗೆ ಯಾವ್ಯಾವುದರದ್ದೋ ನಂಬರು ಬರೆದುಕೊಳ್ಳಲು ಜಾಗ ಮಾಡಿಟ್ಟಿರುತ್ತಾರೆ. ಅವುಗಳೊಂದೂ ನಮ್ಮೊಡನೆ ಇಲ್ಲದಿರುವಲ್ಲಿ ಹಲ್ಲು ಕಡಿಯದೆ ಮತ್ತೇನು ಮಾಡುವುದಕ್ಕಾಗುತ್ತದೆ? ಈ ನಡುವೆ ಹಳೆ ಡೈರಿಯ ಧೂಳನ್ನು ಝಾಡಿಸುವ ಕಾಲ ಬರುತ್ತದೆ ಈ ಹಳೆ ಡೈರಿಗಾಗಿ ಮತ್ತೆ ಮಕ್ಕಳ ರಂಪು. "ಇದೇನು, ವರ್ಷಾಂತ್ಯಕ್ಕೇ ನೀವು ಡೈರಿಗಳನ್ನು ಹೀಗೆ ಎಳೆದುಹಾಕುತ್ತೀರೋ?" —ಎಂದು ಕೇಳುತ್ತೀರಾ? ಹೌದು ಸ್ವಾಮಿ; ಹತ್ತಾರು ಪುಟಗಳಿಗಿಂತ ಹೆಚ್ಚು ಬರೆಯದಿರುವ ಆ ಡೈರಿಗಳನ್ನಿಟ್ಟುಕೊಂಡು ಮಾಡುವುದಾದರೂ ಏನು! ಅದರಲ್ಲಿರುವ ಇಷ್ಟಂಕ್ಕೂ ಮಿಕ್ಕಿದ ಖಾಲಿ ಹಾಳೆಗಳನ್ನು ಓದುವ ಹುಡುಗರಾದರೂ ಉಪಯೋಗಿಸಲಿ. ಜನವರಿ ಏಳು, ಎಂಟರ ತನಕ ದಿನಚರಿ ತಪ್ಪದೆ ಬರೆಯುವುದುಂಟು. ಅನಂತರ ಫೆಬ್ರವರಿ ಅಂತ್ಯದ ವರೆಗೆ ವಾರಕ್ಕೊಮ್ಮೆ ಅಥವಾ ಎರಡುಸಲ ನಾಲ್ಕಕ್ಷರ ಅಲ್ಲಲ್ಲಿ ಬರೆಯುತ್ತೇನೆ. ಆಮೇಲೆ ಅದೂ ಕೂಡ ಇಲ್ಲ ಮನೆಯಲ್ಲಿ ಚೆನ್ನಾಗಿ ಜಗಳವಾಡಿ ರೋಸಿಹೋದದಿನ ಒಂದು ಹಾಳೆಯನ್ನು ವೈರಾಗ್ಯದ ಮಾತುಗಳಿಂದ

ತುಂಬಿಸುವುದಿಲ್ಲವೆಂದಲ್ಲ ಪರಿಚಯದವರಲ್ಲಿ ಯಾರಾದರೂ ಗೋತಾ ಹೊಡೆದಾಗ, ಸ್ಮಶಾನ ಯಾತ್ರೆಗೆ ನೇರವಾಗಿ ಬಂದುಬಿಟ್ಟು "ಬದುಕು ನಶ್ವರ" ಎಂದು ಒಂದು ಪುಟಕೊರೆದಿದ್ದೂ ಇರಬಹುದು ಅಥವಾ ಇನ್ನ ಯಾವುದೋ ಒಂದು ಪುಟದಲ್ಲಿ ದೊಡ್ಡಪ್ಪನ ಅಸ್ಥಮಾಕ್ಕೆ ಡಾಕ್ಟರು ಹೇಳಿದ ಇಂಜಕ್ಷನ್ನಿನ ವಿವರಗಳನ್ನು ಬರೆದಿಟ್ಟು ಕೊಂಡಿದ್ದರೂ ಇರಬಹುದು ಅಂತೂ ಡಿಸೆಂಬರ್ ಹೊತ್ತಿಗೆ ಕರಿದಾಗುವ ಹಾಳೆಗಳು ಬಹಳ ಜಾಸ್ತಿಯೆಂದರೆ ಹದಿನೈದು. ಎರಡು ಹಾಳೆಗಳೋ ನಾಲ್ಕು ಮೀನು ಹುಳ ಗಳೋ ಡೈರಿಯ ನಡುವೆ ಸಿಕ್ಕಿ ಚಪ್ಪಟೆಯಾಗಿ ಉಳಿದಿರಬಹುದು. ಕಾಲಂಗುಲ ಧೂಳು ಅದರಮೇಲೆ ನಿಂತಿರಲೂಬಹುದು. ಅದನ್ನೆಲ್ಲ ಝಾಡಿಸಿ ಕರಿದು ಮಾಡಿದ ಹಾಳೆಗಳನ್ನು ಕಿತ್ತು ತೆಗೆದು ಅದಕ್ಕೆ ಬೆಂಕಿ ಹತ್ತಿಸಿ ಉಳಿದ ಕಳೇಬರವನ್ನು ಮಕ್ಕ ಳಿಗೆ ಹಂಚಿದರೆ ಡೈರಿಯ ಸಮಾಚಾರ ಮುಗಿಯಿತು.

ಕೊನೆಯದಾಗಿ, ಜನವರಿ ೧ನೇ ತಾರೀಖಿಗೆ ಸಂಬಂಧಿಸಿದ ಅತ್ಯಂತ ಗಂಭೀರ ವಾದ ವಿಷಯವೊಂದನ್ನು ಪ್ರಸ್ತಾಪಿಸಬೇಕು ಅದೇನೆಂದರೆ ಹೊಸವರ್ಷದಲ್ಲಿ ನಾವು ಜ್ಯಾರಿಗೆ ತರಬೇಕೆಂದು ಮಾಡಿಕೊಂಡಿರುವ ನಿರ್ಧಾರಗಳು. ಆ ನಿರ್ಧಾರ ಗಳೋ ನಾನಾ ಬಗೆಯವು. ಒಬ್ಬೊಬ್ಬರ ಸಂಕಲ್ಪ ಒಂದೊಂದು ತರಹದ್ದು, ಹದಿ ನೈದು ವರ್ಷಗಳ ಹಿಂದೆ ಬಿಟ್ಟಿದ್ದ ಸಂಗೀತಾಭ್ಯಾಸವನ್ನು ಮತ್ತೆ ಕೈಕೊಳ್ಳಬೇಕೆಂಬ ಸಂಕಲ್ಪ ಒಬ್ಬರದಾದರೆ ಇನ್ನೊಬ್ಬರದು ಜನವರಿ ೧ ರಿಂದ ಸಿಗರೇಟಿನ ಚಟ ಬಿಡುತ್ತೇ ನೆಂಬುದು. ಫೈನಲ್ ಪರೀಕ್ಷೆಗೆ ಸಿದ್ಧರಾಗಬೇಕಾದವರೊಬ್ಬರು ಜನವರಿ ೧ ರಿಂದ ಪ್ರತಿನಿತ್ಯ ಬೆಳಿಗ್ಗೆ ನಾಲ್ಕು ಘಂಟೆಗೆ ಎದ್ದು ಅಭ್ಯಾಸಮಾಡುವುದಾಗಿ ನಿರ್ಧರಿಸಿದ್ದಾರೆ. ಮುಂಜಾನೆ ಎದ್ದು ಆರು ಮೈಲಿಯಷ್ಟು ಓಡಿ ಬೊಜ್ಜು ಕರಗಿಸುವ ನಿರ್ಧಾರ ಒಬ್ಬರ ದಾದರೆ ಯೋಗಾಸನಗಳಿಂದ ತನುಮನಗಳನ್ನು ಸೊಂಪಾಗಿಡುವ ಸತ್ಸಂಕಲ್ಪ ಇನ್ನೊ ಬ್ಬರದು. ಪಾಠ ಹೇಳುವಾಗ ನಿಮಿಷಕ್ಕೆ ನಾಲ್ಕುಸಲ 'I mean' ಎಂಬ ಮೇಷ್ಟ ರೊಬ್ಬರು ಆ ಮೀನಾದ ಚಟವನ್ನು ಜನವರಿ ಒಂದರಿಂದ ತ್ಯಜಿಸುವುದಾಗಿ ನಿಶ್ಚಯಿ ಸಿದ್ದಾರೆ. ಇನ್ನೊಬ್ಬ ಗೆಳೆಯರು ತಾವು ಒಂದು ಕಾಲದಲ್ಲಿ ಕೊಂಡು ತಂದು ಪೇರಿಸಿಟ್ಟ ಹಳೆಯ ಗ್ರಂಥಗಳನ್ನೆಲ್ಲ ಜನವರಿ ೧ ರಿಂದ ಓದಬೇಕೆಂದಿದ್ದಾರೆ. ಹೀಗೆ ಸತ್ಸಂಕಲ್ಪಗಳಿಗೆ ಕೊನೆಮೊದಲಿಲ್ಲ. ಇದೇನು ಯಾರೂ ಬೆರಗಾಗಬೇಕಾದ ವಿಷಯ ವಲ್ಲ. ಏಕೆಂದರೆ ಈ ಸತ್ಸಂಕಲ್ಪಗಳನ್ನೆಲ್ಲಾ ಪ್ರತಿ ಡಿಸೆಂಬರ್‌ನ ಕೊನೇ ವಾರದಲ್ಲಿ ಮಾಡಿಟ್ಟುಕೊಳ್ಳುವುದು ಬಹಳ ಸಮಯದಿಂದ ನಡೆದುಬಂದಿದೆ. ಆದರೆ ಜನವರಿ ಏಳು, ಎಂಟನೇ ತಾರೀಖು ಬರುವ ಹೊತ್ತಿಗೆ....ಹೊತ್ತಿಗೆ ಏನೆಂತ ಹೇಳುವುದು— ನನ್ನ ಡೈರಿಯ ಸಮಾಚಾರ ಜ್ಞಾಪಿಸಿಕೊಳ್ಳಿ!

ಯೋಗಾಸನದವರಿಗೆ ಪಕ್ಕೆ ಉಳುಕಿಕೊಂಡು ಅವರು ಒಂದು ಮೂಲೆಯಲ್ಲಿ ದಿಂಬಾಸೀನರಾಗಿರುತ್ತಾರೆ. ಬೆಳಗ್ಗೆ ಇನ್ನೂ ಕತ್ತಲಿರುವಾಗಲೇ ಎದ್ದು ಆರು ಮೈಲಿ ಓಡಿದವರು ಹಗಲು ಕಂಡ ಹಳ್ಳಕ್ಕೆ ಬಿದ್ದು ಕಾಲುಮುರಿದುಕೊಂಡಿರುತ್ತಾರೆ. ಸಂಗೀತಾಭ್ಯಾಸಕ್ಕೆ ತೊಡಗಿದವರು ನೆರೆಯವರ ಪ್ರತೀಕಾರದಿಂದ ತೆರಳಿ ರೋಸಿ

ಹೋಗಿ ತೆಪ್ಪಗಾಗಿರುತ್ತಾರೆ. ಸಿಗರೇಟು ಭಕ್ತರು ನಾನು ಬಿಡುತ್ತೇನೆಂದುದು ಸಿಗರೇಟಿನ ಚಟವನ್ನು, ಸಿಗರೇಟನ್ನಲ್ಲ-ಎಂದು ತಮ್ಮ ಜಾಣ್ಮೆಗೆ ತಾವೇ ಹಲ್ಲು ಕಿರಿಯುತ್ತಾರೆ. ಬೆಳಗ್ಗೆ ಬೇಗನೆ ಎದ್ದು ಅಭ್ಯಾಸಮಾಡುವಾತ ಕಾಲೇಜಿಲ್ಲದ ದಿನಗಳಲ್ಲಿ ಮಾತ್ರ ಆ ನಿಯಮ ಎಂಬಲ್ಲಿಗೆ ಬಂದಿರುತ್ತಾನೆ. 'I mean ರಾಯರನ್ನು' ಕಂಡರೆ ಅವರು 'I mean' ಎಂದೇ ಪ್ರಾರಂಭಿಸಿ "ತರಗತಿಯಲ್ಲಿ ಮಾತ್ರ ಹಾಗನ್ನದಿದ್ದರಾಯಿತು ಹೊರಗೆ ಪರವಾಗಿಲ್ಲ—I mean' ಆ ನಿಯಮ ಕಾಲೇಜಿಗೆ ಮಾತ್ರ ಅಪ್ಲೈ ಆಗುತ್ತೆ" ಎನ್ನುತ್ತಾ. ಹೀಗೆ ಜನವರಿ ಹದಿನೈದರ ಹೊತ್ತಿಗೆ ಎಲ್ಲರ ಸತ್ಸಂಕಲ್ಪಗಳೂ ಒಂದು ಹದಕ್ಕೆ ಬಂದಿರುತ್ತವೆ. ಇಂಥವರನ್ನು ಕಂಡು ನೀವು ಗೇಲಿ ಮಾಡುತ್ತೀರಿ; ಗೊತ್ತು. 'ನರಕದ ದಾರಿಗೆಲ್ಲ ಸತ್ಸಂಕಲ್ಪದ ಚಪ್ಪಡಿಗಳೇ' ಎಂದು ಮೂದಲಿಸುತ್ತೀರಿ, ಗೊತ್ತು. ಆದರೆ ಹಾಗೆ ಮೂದಲಿಸುವುದು ಅನ್ಯಾಯವೆಂದು ನನ್ನ ಭಾವನೆ. ನಮ್ಮಲ್ಲಿ ಅದೊಂದಾದರೂ ಸದ್ಗುಣವಿದೆ ನೋಡಿ. ನಿಮ್ಮ ಸಂಕಲ್ಪಗಳೆಲ್ಲಾ ಕಾರ್ಯರೂಪಕ್ಕೆ-ಬರಲಿ ಎನ್ನುತ್ತೀರ? ಅದಕ್ಕೇನು ಮಾಡುವುದು ಸ್ವಾಮಿ! ಬ್ರಹ್ಮ ಕೆಲವರನ್ನು ಕವಿಗಳಾಗಿ ಅಂತ ಮಾಡಿದ. ಕೆಲವರನ್ನು ರಾಜಕಾರಣಿಗಳಾಗುವುದಕ್ಕೆಂದು ಸೃಷ್ಟಿಸಿದ, ನಮ್ಮನ್ನೋ ಸತ್ಸಂಕಲ್ಪಗಳನ್ನು ಮಾಡುವುದಕ್ಕಾಗಿಯೋ ನಿರ್ಮಿಸಿದ್ದಾನೆ. ಅದನ್ನು ಕಾರ್ಯರೂಪದಲ್ಲಿ ತೋರಿಸಲು ಬೇರೆ ಮಂದಿ ಇದ್ದೇ ಇರುತ್ತಾರೆ. ಅಂದಮೇಲೆ ನಾವೇನು ಭೂಮಿಗೆ ಭಾರವೆ? "work is vulgarised good resolution's"—ಎಂದು ಯಾರೋ ಹೇಳಿದ್ದನ್ನು ಜ್ಞಾಪಿಸಿಕೊಳ್ಳಿ! 'ತಿತಿ ಮಾಡೋವ್ರಿಗೆ ಚೆಡ್ಡಿ ಹೊಲಿಯೋ' ಕೆಲಸಕ್ಕೆ ಹೇಳಬೇಡಿ!

ಯಾವುದು ಹೇಗೇ ಇರಲಿ; ಒಂದು ಮಾತಂತೂ ನಿಶ್ಚಯ. ಜನವರಿ ಒಂದರಿಂದ ಜ್ಯಾರಿಗೆ ತರುವುದಕ್ಕಾಗಿ ಡಿಸೆಂಬರ್ ತಿಂಗಳಲ್ಲಿ ಮಾಡಿಕೊಳ್ಳುವ ಸಂಕಲ್ಪಗಳನ್ನು ವರ್ಷಾಂತ್ಯದಲ್ಲಿ ಮೆಲುಕು ಹಾಕುವ ಸುಖ ಅನುಭವಿಸಿದವರಿಗೇ ಗೊತ್ತು. ಕಳೆಯುತ್ತಿರುವ ವರ್ಷದಲ್ಲಿ ಅನುಭವಿಸಿದ ಎಲ್ಲ ಸೋಲುಗಳನ್ನು ಎಲ್ಲ ದೌರ್ಬಲ್ಯವನ್ನೂ ಮರೆತು ಹೊಸವರ್ಷವನ್ನು ಹುರುಪಿನಿಂದ, ಸಂಭ್ರಮದಿಂದ, ಸ್ವಾಗತಿಸಬೇಕಾದರೆ ಬೇರೆ ಉತ್ತಮ ಮಾರ್ಗವಿಲ್ಲ. ಡಿಸೆಂಬರಿನಲ್ಲಿ ಮಾಡಿಕೊಂಡ ಸತ್ಸಂಕಲ್ಪಗಳನ್ನು ಜನವರಿ ೧ ರಂದು ಕಾರ್ಯರೂಪಕ್ಕೆ ತರಲು ನಾವು ಮಾಡುವ ಪ್ರಯತ್ನವಿದೆಯಲ್ಲ—ಅದರಿಂದಲೇ ಆ ದಿನ ನಮಗೆ ಬಹಳ ಸಂಭ್ರಮದ ದಿನ. ಆದರೆ ಯಾರಾದರೂ ತಮ್ಮ ಸತ್ಸಂಕಲ್ಪಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಯಶಸ್ವಿಗಳಾದೀರಿ, ಜೋಕೆ! ಏಕೆಂದರೆ ಮುಂದಿನ ಜನವರಿ ೧ ಸಪ್ಪೆಯಾದೀತು!

(ಈ ಜನವರಿ ೧ನೇ ತಾರೀಖಿನ ದಿನ ತಮ್ಮ ಕಾಗದ ಪತ್ರಗಳಲ್ಲಿ '೧-೧-೫೪' ಎಂದು ಮೇಲ್ಗಡೆ ಬರೆಯುವ ಸೋದರ ಸೋದರಿಯರಿಗೆ ಇದು ಅರ್ಪಿತ)

—ರಾಮಕೃಷ್ಣ.

ಬೀಡಿಗಾರರ ಒಕ್ಕೂಟ

ಯಾವ ಪತ್ರಿಕೆ ತೆಗೆಯಿರಿ ದೈನತೆಯ ದೈನಂದಿನವಾಗಲಿ, ವಾರವಮಾಡಿಕೊಂಡಿರುವ ಪತ್ರಿಕೆಯಾಗಲೀ, ಪಕ್ಷನಡೆಸುತ್ತಿರುವ, ತನ್ನ ಪಕ್ಷವನ್ನೇ ನಡೆಸುತ್ತಿರುವ ಪತ್ರಿಕೆಯಾಗಲೀ, ಮೋಸಪತ್ರಿಕೆಯಾಗಲೀ, ಯಾವುದನ್ನು ತೆಗೆದರೂ ಬೀಡಿ ಸೇದಿದರೆ, ಸಿಗರೇಟು ಎಳೆದರೆ, ತಂಬಾಕಿಗೆ ಬೆಂಕಿ ಹಚ್ಚಿದರೆ, ಅಂತಹವನಿಗೆ ಇಂತಹ ಇಂತಹ ಖಾಯಿಲೆಗಳು ಬಂದು "ಇತಿ ಶ್ರೀ" ಆಗುತ್ತದೆ ಎಂದೊಂದು ಲೇಖನ ಇದ್ದೇ ಇರುತ್ತದೆ.

ಬೀಡಿಯ ಭಕ್ತರು, ಸಿಗರೇಟ್ ಸೇದುವವರು, ತಂಬಾಕಿನ ತಥಾಸ್ತುಗಳು **ಈಗ ಒಕ್ಕೂಟ** ಸೇರಲೇಬೇಕು.

"ಬೀಡಿಯ ಹಾಗೂ ಅಥವಾ ವಾ ಸಿಗರೇಟಿನ ಸಾರದ **ಎರಡು** ತೊಟ್ಟುಗಳನ್ನು "ನಾಯಿಯ ನಾಲಿಗೆಯಮೇಲಿಟ್ಟರೆ ನಾಯಿಯು ದತ್ತಾತ್ರೇಯನ ಪಾದಾರವಿಂದವನ್ನು ಸೇರುತ್ತದೆ" ಎಂಬುದು ಮೊದಲ ವೈಜ್ಞಾನಿಕ ಶೋಧನದ ಫಲ.

"ಬೀಡಿಯ ವಾ ಸಿಗರೇಟಿನ ಸಾರದ **ಒಂದೇ** ತೊಟ್ಟನ್ನು ನಾಯಿಯ ನಾಲಿಗೆಯಮೇಲೆ ಪ್ರಯೋಗಿಸಿದರೆ, ಆ ನಾಯಿಯ ರಕ್ತದ ಓಟವು ಹೆಚ್ಚಾಗಿ, ಒತ್ತಡವು ಮೂರ್ಮಡಿಸಿ, ಕಾಲಕ್ರಮೇಣ ಕಾರೊನರಿ ವ್ಯಾಧಿಯು ಬಂದು ಕಾಲವಾಗುತ್ತದೆ, ಆ ನಾಯಿ; ಎಂದೂ ವಿಜ್ಞಾನ ಶೋಧಕರು ಕಂಡುಹಿಡಿದಿದ್ದಾರೆ ಎಂಬುದು ಲೇಖನದ ಒಂದು ರೀತಿ.

"ಬೀಡಿಯ ವಾ ಸಿಗರೇಟಿನ ಧೂಮಪಾನವನ್ನು ಒಂದು ನಾಯಿಗೆ ಗಂಟೆಗೆ ಇಪ್ಪತ್ತರಂತೆ ಮಾಡಿಸಿದರೆ, ಮೂರೇ ತಿಂಗಳಲ್ಲಿ ಆ ನಾಯಿಯ ನಾಲಿಗೆಗೆ ರಣಹುಣ್ಣು ಬರುತ್ತದೆ. ನಾಲ್ಕೇತಿಂಗಳಲ್ಲಿ ಶ್ವಾಸಕೋಶಗಳಿಗೆ ರಣಹುಣ್ಣು ಬರುತ್ತದೆ" ಎಂಬುದನ್ನು ಶಾಸ್ತ್ರೀಯವಾಗಿ ಸಿದ್ಧಗೊಳಿಸಿದ ಲೇಖನ ಒಂದು ಇದ್ದೇ ಇರುತ್ತದೆ.

* * *

ಅಲ್ಲಾ! ನಾಯಿಯ ನಾಲಿಗೆಯಮೇಲೆ ಇಟ್ಟ ವಸ್ತು ಮನುಷ್ಯನಿಗೂ ಅದೇ ರೀತಿ ವಿಷಪ್ರಾಯವಾಗುತ್ತದೆಯೇ? ನಾಯಿ ಮೂಳೆ ತಿಂದು ಜೀರ್ಣಿಸಿಕೊಳ್ಳುತ್ತೆ ಆದರೆ ಮನುಷ್ಯ? ನಾಯಿ ತಿನ್ನಬಾರದ್ದು ತಿಂದು ಪುಷ್ಟಿಯುತವಾಗುತ್ತೆ, ಆದರೆ

ಮನುಷ್ಯ? ಅಂಗಮೇಲೆ ನಾಯಿಗೆ ವಿಷವಾಗುದು ಮನುಷ್ಯನಿಗೂ ವಿಷ ಎಂದು ಈ ವೈಜ್ಞಾನಿಕರು ಸಾಧಿಸುತ್ತಾರಲ್ಲಾ! ಏಕೆ?

ಈ ಮೂಲಭೂತ ಪರೀಕ್ಷೆಯನ್ನು ಮಾಡಲೋಸುಗ ನಾನೊಂದು ಪ್ರಯೋಗ ವನ್ನು ಮಾಡಿದೆ ಅದು ಈ ರೀತಿಯ ಪ್ರಯೋಗ: ಪ್ರಯೋಗ ಕರ್ತರು ತಮ್ಮ ತಮ್ಮ ಸಿದ್ಧಾಂತಗಳನ್ನು ಸಿದ್ಧಗೊಳಿಸುವಾಗ ಏನು ಮಾಡುತ್ತಿದ್ದರು? ಎಂಬುದೇ ನನ್ನ ಪ್ರಯೋಗ.

ಮೂರುತರಹ ಸಿದ್ಧಾಂತಗಳು ಏರ್ಪಡಿಸಲ್ಪಟ್ಟಿವೆಯಲ್ಲವೇ? ಈ ವೈಜ್ಞಾನಿಕ ರಿಂದ. ಈ ವೈಜ್ಞಾನಿಕತ್ರಯ ಗುಂಪಿನವರು ಏನುಮಾಡುತ್ತಿದ್ದರು, ತಮ್ಮ ಪ್ರಯೋಗ ಕಾಲದಲ್ಲಿ?

ನನ್ನ ಪರೀಕ್ಷಾ ಫಲಿತಾಂಶಗಳು ಈ ರೀತಿ ದೊರೆತವು. ಎರಡುತೊಟ್ಟು ಬೀಡಿ ರಸವನ್ನು ನಾಯಿಯ ನಾಲಿಗೆಯ ಮೇಲಿಟ್ಟು ಪರೀಕ್ಷಿಸಿದವರು, ಆ ಕಾಲದಲ್ಲೆಲ್ಲಾ ಗಂಟೆಗೆ ೧೦ ರಂತೆ ಬೀಡಿ ಸೇದುತ್ತಿದ್ದರು!

ಒಂದೇತೊಟ್ಟು ಸಿಗರೇಟ್ ಸಾರವನ್ನು ನಾಯಿಯ ನಾಲಿಗೆಯ ಮೇಲಿಟ್ಟವರು ಆ ಕಾಲದಲ್ಲೆಲ್ಲಾ ಸಿಗರೇಟನ್ನು ಗಂಟೆಗೆ ಐದರಂತೆ ಸೇದುತ್ತಿದ್ದರು!!

ಗಂಟೆಗೆ ಇಪ್ಪತ್ತರಂತೆ ನಾಯಿಗೆ ಧೂಮಪಾನ ಮಾಡಿಸಿದವರು, ಗಂಟೆಗೆ ಮೂವತ್ತರಂತೆ ತಂಬಾಕಿನ ಧೂಮವನ್ನು ಚಿಲುಮೆಗಳ ಮೂಲಕ ಸೇದುತ್ತಿದ್ದರು!!!

* * *

ಅಂದಮೇಲೆ ಅರ್ಥವಾಯಿತೇ? ಈ ಫಲಿತಾಂಶಗಳು! ಧೂಮಪಾನದ ಅಮಲಿ ನಲ್ಲಿ ಎಂತೆಂತಹ ಸುಖವಿನಾಶಕ ಫಲಿತಾಂಶಗಳು ಬರಬಹುದು ಎಂಬುದು ಮನಗಂಡಿ ತಲ್ಲವೇ?–ವೈಜ್ಞಾನಿಕರ ಪ್ರಯೋಗಗಳಿಗೆ ತಂಬಾಕಿನ ಹೊಗೆಯಿಲ್ಲದಿದ್ದರೆ ನಾಯಿ ಪಾಡೇ ಹೌದು

* * *

ಧೂಮಪಾನದಿಂದ ಶಿಸ್ತು, ಸಂಯಮ, ಸತ್ಯ, ಇವುಗಳ ಆರಾಧಕರಿಗೇ ಹೀಗಾದಮೇಲೆ ಪಾಮರರಾದ ನಮ್ಮಂತಹವರಮೇಲೆ ಇನ್ನೂ ಏನು ಪರಿಣಾಮ ವಾಗುತ್ತದೋ ಅಲ್ಲವೇ? ಅಂದ ಕಾರಣ ಬೀಡಿ, ಸಿಗರೇಟ್ ತಂಬಾಕುಗಾರ ಸೋದರರೇ ಇಂದಿನಿಂದ ಧೂಮಪಾನವನ್ನು ವರ್ಜಿಸೋಣ. ಒಕ್ಕಟ್ಟಿನಿಂದ ತ್ಯಜಿ ಸೋಣ. ನವಜನಾಂಗದ ನವೋದಯವನ್ನು ಸ್ಥಾಪಿಸೋಣ. ಒಕ್ಕೊರಲಿಂದ ಜೈ! ಎನ್ನಿರಿ–ಎಂದು ಸಿಗರೇಟ್ ಸೇದುತ್ತಾ ಘೋಷಿಸೋಣ.

— ಶಿವು.

ಹಾಡುಗಬ್ಬ

ಹಾಡುಗಬ್ಬಗಳು ಕನ್ನಡದಲ್ಲಿ ತೀರ ಕಡಿಮೆ, ಆದರೆ, ಹಾಡುವವರು ಹೆಚ್ಚು. ಹಾಡಬೇಕಾದ ಸನ್ನಿವೇಶಗಳೂ ಬಹಳ, ನಾಟಕಗಳನ್ನಾಡುವಾಗ, ಸೀನಿಗೂ ಸೀನಿಗೂ ಮಧ್ಯೆ, ಪಾತ್ರಧಾರರು ಸಿದ್ಧವಾಗುವಾಗ, ಹಾಡುಹಬ್ಬವೊಂದನ್ನು ಹಾಡಿದರೊಳ್ಳೆಯದು. ನೃತ್ಯದ ಪ್ರೋಗ್ರಾಮುಗಳಲ್ಲೂ ಅಷ್ಟೆ. ಬಸ್ಸಿಗೆ ಕಾಯುತ್ತಿರುವಾಗ, ಹಾಡಬೇಕೆನಿಸುತ್ತದೆ. ಹೊಟ್ಟೆ ತಾಳಹಾಕುತ್ತಿರುವಾಗ, ನಾಲಿಗೆ ಹಾಡನ್ನರಸುತ್ತದೆ. ಜಟಕಾ ಹೊಡೆಯುವಾಗ, ಬಸ್ಸು ಕೆಟ್ಟುಹೋದಾಗ, ರೈಲು ಲೇಟಾದಾಗ, ದೋಸೆ ಬರಲು ತಡವಾದಾಗ, ಬಿಸಿನೀರು ಸ್ನಾನಮಾಡುವಾಗ, ಸಿನಿಮಹಾಡಿಗೆ ಬದಲು, ದೇಶೀ ಕನ್ನಡದ ಹಾಡುಹಬ್ಬಗಳನ್ನೇಕೆ ಕನ್ನಡಿಗರು ಕೂಗಬಾರದು? ಅಸೆಂಬ್ಲಿಗಳಿಂದ ವಾಕ್ ಔಟ್ ಮಾಡುವಾಗ, ಮುನಿಸಿಪಾಲಿಟಿ ಮೀಟಿಂಗುಗಳಲ್ಲಿ ಬಿಸಿಏರಿದಾಗ, ಕೋಆಪರೇಟಿವ್ ಸೊಸೈಟಿಗಳಿಂದ ನೋಟೀಸ್ ಚೀಟಿ ಬಂದಾಗ,....ಹಾಡುವುದಕ್ಕೇನು, ನೂರಾರು ಸಂಕಟ ಸನ್ನಿವೇಶಗಳಿವೆ. ಹಾಡುಗಳು ಇಲ್ಲ, ಅಷ್ಟೆ.

ಹಾಡುಗಬ್ಬಗಳೇ ಬೇರೆ; ಕವನಗಳೇ ಬೇರೆ. ಗಮಕಿಗಳು, ಪಾಪ, ಕವನಗಳಿಗೆ ರಾಗ ಹೊಸೆದು ಹಿಗ್ಗಿಸಿ ಜಗ್ಗಿಸಿ ಒದ್ದಾಡುತ್ತಾರೆ. ಹಾಡುಗಬ್ಬಗಳಿಗೆ ಹಾಡು ಮುಖ್ಯ; ಹಬ್ಬವಾಗಲೇಬೇಕೆಂಬ ನಿರ್ಬಂಧವಿಲ್ಲ. ಕವನಗಳಲ್ಲಿ ಮಾತು ಮುಖ್ಯ; ಹಾಡುಗಬ್ಬಗಳಲ್ಲಿ ಶಬ್ದವಿನ್ಯಾಸವೇ ಮುಖ್ಯ....ಆ ಆ ಆ....ಆ, ಅಥವಾ, ಉ ಉ ಉ....ಉ ಎಂಬುದರಲ್ಲೇ ಹಾಡುಗಬ್ಬಗಳ ಜೀವಾಳ ಇರುವುದು. ಶಬ್ದಮಣಿದರ್ಪಣ, ಕಾವ್ಯಕ್ಕೆ; ಅದರ ತರ್ಪಣ, ಹಾಡುಗಬ್ಬಕ್ಕೆ ವ್ಯಾಕರಣ, ಕಾವ್ಯಕ್ಕೆ; 'ವೈಯಾಕರಣನ ಅಂತ್ಯಕ್ರಿಯೆ' ಹಾಡುಗಬ್ಬಕ್ಕೆ. ಪ್ರಾಸವೇ ಹಾಡುಗಬ್ಬದ ನಾಡಿ; ಕನ್ನಡನುಡಿಯ ಅಡಿಗಡಿಯ ಮಿಡಿತ.

ಮರುಳೇ! ಮರುಳೇ! ಮರಳಕಾಡಿಗೆ ಮರಳೋ! ಮರುಳೇ!
ತರಳೆಯರೆಲ್ಲರು ಮಲ್ಲಿಗೆ ಯರಳೇ! ಕರುಳೇ ಇಲ್ಲದ ಅರಳುಗಳೋ!
ಮರುಳೇ! ಮರುಳೇ! ಕೊರಳಿಗೆ ಉರುಳೋ! ಮರಳಕಾಡಿಗೆ ಮರಳೋ! ಓ! ಓ!

ಇದೊಂದು ಉತ್ತಮ ಹಾಡುಗಬ್ಬ! ಹಾಸ್ಟಲುಗಳ ಬಾತ್‌ರೂಂಗಳಲ್ಲಿ ಇದನ್ನು ಹಾಡಿದರೆ, ಪ್ರತಿಕೊಠಡಿಯಿಂದಲೂ ಇದರ ಭಾವಗಳು ಪ್ರತಿಧ್ವನಿತವಾಗುತ್ತವೆ. ಈ ಹಾಡು ತರುಣಪ್ರಿಯವಾಗಲು ಆರುಕಾರಣಗಳಿವೆ (೧) ಪ್ರಾಸ (೨) ಅಶ್ಲೀಲದ

ಸೋಂಕು (೩) ದುಃಖ. (೪) ವಿಶ್ವವೈಶಾಲ್ಯ .. ತರಳೆಯರೆಲ್ಲರು ಮಲ್ಲಿಗೆ ಅರಳಾಗಿದ್ದರೂ, ಕರುಳೇ ಇಲ್ಲದವರು, ಎಂಬ ಜಗತ್‌ತತ್ವ (೫) ಆತ್ಮಾಭಿಮಾನ ತನ್ನನ್ನು ತಾನು ಕೊಲ್ಲುವ ತೀರ್ಮಾನ (೬) ಟಿ ಎಸ್. ಎಲಿಯಟ್ (ನೋಬಲ್ ಪಾರಿತೋಷಕಧಾರಿ)ನ ವೇಸ್ಟ್‌ಲ್ಯಾಡ್ ಕಾವ್ಯದ ಸ್ಮರಣೆಯನ್ನು ತಂದುಕೊಡುವ ನವ್ಯಕಾವ್ಯತ್ವದ ಛಾಯೆಯಿಂದ ಸಂಪಾದಿತವಾದ ಆಧುನಿಕತೆ. ಮರಳಕಾಡಿಂದ ಬಂದ ಮರಳಕಾಡಿಗೆ ಮರಳುವುದೇ ನರನ ವರ, ಎಂಬ ಮಹಾಸತ್ಯ. ಹಾಡುಗಬ್ಬಗಳಲ್ಲಿ ಪ್ರಾಸವಿರಲೇಬೇಕು, ದುಃಖವಿರಲೇಬೇಕು; ಆಮೇಲೆ ಇನ್ನೊಂದು ಪ್ರತಿ ಒಂದು ಹಾಡಿನಲ್ಲೂ, ಒಂದೇ ಒಂದು ಮಾತು ಮತ್ತೆ ಮತ್ತೆ ಹಾಸು ಹೊಕ್ಕಾಗಿ ಬರಲೇಬೇಕು. ಉದಾಹರಣೆಗೆ:

ಅಯ್ಯೋ! ಅವರನು ಕ್ಷಮಿಸು
ಅಯ್ಯೋ! ಅವರನು ಕ್ಷಮಿಸು
ಅಯ್ಯೋ! ಅವರನು ಕ್ಷಮಿಸು
ಅವರೇನು ಬಲ್ಲರು ನನ್ನ ಗೋಳಾ........
ದೇವ!
ಅವರೇನು ಬಲ್ಲರು ನನ್ನ ಗೋಳಾ........

ಆಯಿತಿವಗೂ ಸಾವು
ಆಯಿತಿವಗೂ ನಾವು
ಆಯಿತಿವಗೂ ಸಾವು
ಎಂದವರು ಸೊನ್ನೆಯನು ಸುತ್ತಿದರು ಪೂರಾ........
ಓನಾಮ
ಬರದವರು ಸೊನ್ನೆಯನು ಸುತ್ತಿದರು ಪೂರಾ........

ಅಯ್ಯೋ! ಎನಗಿಲ್ಲ ಬಿ. ಎ.
ಅಯ್ಯೋ! ಎನಗಿಲ್ಲ ಬಿ. ಎ.
ಅಯ್ಯೋ! ಎನಗಿಲ್ಲ ಬಿ. ಎ.
ಅವರೇನು ಬಲ್ಲರು ಈ ನನ್ನ ಗೋಳಾ........
ಕಟುಕ
ಅವರೇನು ಬಲ್ಲರು ಈ ನನ್ನ ಗೋಳಾ ....

ಸುಲಭ! ಅಲ್ಲವೆ, ಇಂತಹ ಹಾಡುಗಬ್ಬ ಬರೆಯುವುದು? ತಾನಾಗಿಯೇ ಹೊರಹೊಮ್ಮುತ್ತದೆ, ರಿಸಲ್ಟ್ ಬಂದ ದಿನ. ಆದರೂ, ಎಷ್ಟು ಸೊಗಸಾಗಿದೆ! ಎಂಥ ಹೃದಯಂಗಮ....ಸರಳ ಸುಮಧುರ ಸಹತಾಪ ಸಾಕ್ರೋಶ ಸಂಕಟ ಜನಿತ ಸಾಹಿತ್ಯ, ಅಂದರೆ,....ಇದು;

ಮತ್ತೊಂದು ಬಗೆಯ ಜನಪ್ರಿಯ ಹಾಡುಗಬ್ಬವನ್ನು ಕಟ್ಟುವುದು ಇನ್ನೂ ಸುಲಭ. ಆಹಾರವೇ ಇದರ ಮುಖ್ಯವಿಷಯ, ಆಹಾರ ಮತ್ತು ದುಃಖ ಮತ್ತು ತುಸು ಅಶ್ಲೀಲ, ಉದಾಹರಣೆಗೆ:

ಬಳೇಪೇಟೆಯಲಿ ಬಳುಕುತ ಬಂದಳು/ಮಾತಿನ 'ಮುಂಗಾರಿ'
ನಿಂತೆ; ನೋಡಿದೆ! ಕುಂತೆ; ನೋಡಿದೆ!

ನಾಗಾಲೋಟದ ನಾಲಗೆ ಯುವಳು, ನನಗೂ ಬೇಡ, ನಿಮಗೂ ಬೇಡ,
ನುಗ್ಗಿದೆ ಪಕ್ಕದ ಹೋಟಲಿಗೆ!

ಪೂರಿಪಲ್ಯ ಮೆಲ್ಲುತ ಅಲ್ಲೇ, ಮರೆತೇ ಅವಳನ್ನ
ಚೂರೀ ನಾಲಗೆ ಮರೆಯಲು ಎನಗೆ
ಪೂರೀಪಲ್ಯವೆ ಬೇಕಣ್ಣಾ.

ತೇರಿನ ಬೀದಿಲಿ ತೆವಳುತ ಬಂದಳು 'ಗಾಮಾ' ಗಜಗಮನೆ
ನಿಂತೆ; ನೋಡಿದೆ! ಕುಂತೆ; ನೋಡಿದೆ!

ದಿಡ್ಡಿಬಾಗಿಲ ಗಿಡ್ಡೀಹುಡುಗಿ, ನನಗೂ ಬೇಡ, ನಿಮಗೂ ಬೇಡ
ನುಗ್ಗಿದೆ ಪಕ್ಕದ ಹೋಟಲಿಗೆ!

ಇಡ್ಲೀ ಚಟ್ನಿ ಮೆಲ್ಲುತ ಅಲ್ಲೇ, ಮರೆತೇ ಅವಳನ್ನ
ದೊಡ್ಡೀ ಹುಡುಗಿಯ ಮರೆಯಲು ಎನಗೆ
ಇಡ್ಲೀ ಚಟ್ನಿಯೆ ಬೇಕಣ್ಣಾ.

ಸುಣ್ಣದ ಪೇಟೆಲಿ ಕಣ್ಣಿಗೆ ಬಿದ್ದಳು, ಸಣ್ಣನೆ ಸಿಂಗಾರಿ
ನಿಂತೆ; ನೋಡಿದೆ; ಕುಂತೆ; ನೋಡಿದೆ;

ಉದ್ದಕು ಬೆಳೆದಾ ಕಡ್ಡೀನಾರೀ, ನನಗೂ ಬೇಡ, ನಿಮಗೂ ಬೇಡ
ನುಗ್ಗಿದೆ ಪಕ್ಕದ ಹೋಟಲಿಗೆ!

ಸಾದಾ ದೋಸೆಯ ಮೆಲ್ಲುತ ಅಲ್ಲೇ, ಮರೆತೆ ಅವಳನ್ನ!
ಸೀದಾ ಬೆಳೆದಾ ಹುಡುಗಿಯ ಮರೆಯಲು
ಸಾದಾ ದೋಸೆಯು ಬೇಕಣ್ಣಾ.

ಈ ಮಾದರಿಯನ್ನನುಕರಿಸಿ, ವಾಚಕರು ತಮಗೆ ತೋರಿದಷ್ಟು ಹಾಡಹಬ್ಬಗಳನ್ನು ಸರಸರನೆ ರಚಿಸಬಹುದು. ಆದರೆ, ಇಂದಿನ ವಾತಾವರಣದಲ್ಲಿ ದೀನದಲಿತರನ್ನು ಕುರಿತ ಹಾಡುಹಬ್ಬಕ್ಕೆ ಪ್ರಾಶಸ್ತ್ಯ ಜಾಸ್ತಿ. ದೀನದಲಿತರೂ ಬೇಕು, ದೇವರೂ ಬೇಕು, ಆಗ, ಚಿನ್ನದ ಹೂವಿಗೆ ಪರಿಮಳ ಬೆರೆತಂತೆ ಉದಾಹರಣೆಗೆ, ಇದನ್ನು ನೋಡಿರಿ; ಇದರಂತೆ ಬರೆಯಿರಿ; ಬರೆದು ಹಾಡಿರಿ; ಹಾಡಿಸಿರಿ.

ಪೊರಕೆಯ ಹೊತ್ತು, ಬೆಳಕಿನ ಹೊತ್ತು
ಗುಡಿಗಳು ಗುಡಿಸಲು ಬಂಗಲಿ ಬೀದಿ
ನರಕದಿ ಹುಟ್ಟಿದವನಂತೆಯೆ, ತೊತ್ತು,
ಗುಡಿಸುವೆ ನಾನು, ಸುಸ್ತೋ ಸುಸ್ತು.
ಪೊರಕೆಯ ಹೊತ್ತೇ ಸಗ್ಗಕೆ ಹತ್ತಿ
ತಾವರೆ ಹಾವು ಮುತ್ತಾ ಎತ್ತಿನ
ಕೊಟ್ಟಿಗೆ ಗುಡಿಸುವೆ, ಬೆಳಗಿನ ಹೊತ್ತು
ಅದುವೇ ಮೋಕ್ಷ, ದೇವ ನಮೋಸ್ತು

—ನಾ. ಕ.

ಪುನಃ ಆಯ್ಕೆಯು ನಡೆಯೆ

(ವಿ. ಸೀ ಯವರಲ್ಲಿ ಕ್ಷಮಾಪಣೆಗಳೊಡನೆ)

—o—

ಶಿಲ್ಪಿಗಳು ಕೆತ್ತಿದರು ನಿನ್ನ ಮೂರ್ತಿಯನು
ಚೆಲ್ವ ಮಂದಿರಗಳನು ಸಮೆದಿಟ್ಟರು.
ಗಾಯಕರು ಹಾಡಿದರು ನಿನ್ನ ಮೈಮೆಯನು
ಮೇಳೈಸಿ ರಾಗದಲಿ ತಾಳಗಳಲಿ.
ಚಿತ್ರಕರು ನಿನ್ನ ಮೊಗ ಬಣ್ಣಿಸಿದರು
ಬಾಂಬಿಲ್ಲ ಕಳೆನೋಟ ಬರೆದಿಟ್ಟರು.
ಸಖರೆಲ್ಲ ಬಲಸಾಸ ವೋಟೆರೆದರು
ಸಿರಿಯ ಹಿರಿಯಾಸನದಿ ಕೂಡಿಸಿದರು.
ಹಿರಿಕವಿಗಳಿದನೆಲ್ಲಾ ಕೊಂಡಾಡಿ ಹಿಗ್ಗಿದರು
ಅನೃತ ವಾಣಿಗಳಲ್ಲಿ ತುಂಬಿಟ್ಟರು

* * *

ನಿನ್ನ ಅವಧಿಯು ಮುಗಿಯೆ
ಪುನಃ ಆಯ್ಕೆಯು ನಡಿಯೆ.
ಯಾರು ಇವನೆಂದೆಲ್ಲರೂ ಕೇಳ್ವರೇ!!

—ಪಾಪಿ.

ಅಳಿಯ ಮತ್ತು ಹಲ್ಲಿ

ಹಿರಿಯ ಕವಿಯು ಹಾಡನಿಂತು
ಅಳಿಯ ಕುರುಕುತಿದ್ದನು;
"ನಿನ್ನದೀ ತನು
ನಿನ್ನದೀ ಧನ
ನಿನ್ನ ನಿನ್ನ ನಿನ್ನದೀ ಮನ ऽ ऽ ऽ"
—ಹಾಡು ಮುಗಿಯಿತು.

ಹಾತೆಯೊಂದ ಹಿಡಿಯಲೆಂದು
ಗೋಡೆಯಳೆಯುತ್ತಿದ್ದ ಹಲ್ಲಿ
ಕಿಚ್ ಕಿಚ್ ಕಿಚೀ ಎಂದು
ಸಾಕ್ಷಿ ನುಡಿಯಿತು—

ಹಾಡಿದ ಮುಖ ಅರಳಿತು
ಹಿಗ್ಗಿ ನುಡಿಯಿತು—
"ಹಲ್ಲಿ ನುಡಿವುದನ್ನು ಕೇಳಿ!
ನಿನ್ನದೀ ತನು
ನಿನ್ನದೀ ಧನ
ನಿನ್ನ ನಿನ್ನ ನಿನ್ನದೀ ಮನ ऽ ऽ ऽ"

* *

ತನು ಮನ ಧನವೆಲ್ಲವನ್ನ
ಎಂದೊ ಧಾರೆಯೆರೆದು ಕೊಟ್ಟ
ಮಾವ ಹೊರಗಿನಿಂದ ನಿಂತು
ಮೆಲ್ಲನೆಂದರು—
"ನನ್ನದೀ ಮನೆ
ನನ್ನದೀ ಧನ
ನಿಮ್ಮ ನಿಮ್ಮ ನಿಮ್ಮ ಸಾಕಿ ಸೋತೆನಾ
—ಅಳಿಯ ಸಾಕಿ ಸೋತೆನಾ"

ಕಿಚ್ ಕಿಚ್ ಕಿಚೀ ಎಂದು
ಮತ್ತೆ ಹಲ್ಲಿ ನುಡಿಯಿತು—
ಅಳಿಯ ಉಗುಳು ನುಂಗುತಿರಲು
ಹಾತೆಯೊಂದ ನುಂಗಿತು.

— ರಾಮಕೃಷ್ಣ.

ವಿಶ್ವಸಾಹಿತ್ಯ

ವಿಶ್ವನಾಥನಿಗೆ ಕಡುಕೋಪ ಬಂದು ಎಡಪಾರ್ಶ್ವದಲ್ಲಿ ತಲೆನೋವು ಕಾಣಿಸಿಕೊಂಡಿತ್ತು. ಎಂತಹ ವಿಮರ್ಶಕರಿವರು. ಒಬ್ಬರಿಗೂ ತಲೆಯಲ್ಲಿ ಸದ್ಭಾವನೆ ಬಂದು ಪರವಾಗಿಲ್ಲ ಅನ್ನಬಾರದೆ! ನೂರಾರು ಕಾದಂಬರಿ - ಕಾರರು ಹುಟ್ಟಿಕೊಂಡಿದ್ದರು. ಜೊಳ್ಳು – ಗಟ್ಟಿ ಎರಡೂ ಮಿಶ್ರ ನೀರಿಗೆ ಸುರಿದಾಗಲೇ ಜೊಳ್ಳು ತೇಲಬೇಕಲ್ಲವೆ? ಅದೆಂತಹ ನೀರು - ವಿಮರ್ಶಕನ ಮಸಿಯ ಮೂಸೆಯಲ್ಲಿ ಸುರಿದು ನೋಡಬೇಕು. ತನ್ನ ಕೃತಿ ಉತ್ತಮವೆ ಅಧಮವೆ–ಮಧ್ಯಮವೆ! ಆದರೆ ಎಲ್ಲಿದ್ದಾನೆ ಇಂತಹ ನಿಸ್ಪೃಹ ನಿಷ್ಠಾವಂತ ವಿಮರ್ಶಕವೈದ್ಯ? ಅದೇ ಕೋಪ ವಿಶ್ವನಿಗೆ.

ಒಂದೊಂದೇ ವಿಮರ್ಶೆ ಹಿಡಿದು – ಓದುತ್ತಿದ್ದ. ತನ್ನ ಸಾಹಿತ್ಯ – ವಿಶ್ವ ಸಾಹಿತ್ಯ – (ಅರ್ಥಾತ್ ವಿಶ್ವನಾಥ ಸಾಹಿತ್ಯ)ದ ಬಗ್ಗೆ ವಿವಿಧ ವಿಮರ್ಶಕರ ವಿವಿಧ ಕುಟೀಕೆ_ಕುಚೋದ್ಯದ ವೈಖರಿ ಅರೆತಲೆಶೂಲೆಯನ್ನು ಹೆಚ್ಚಿಸುವುದೆಂದು ತಿಳಿದಿದ್ದರೂ ಅವನ್ನೆ ನೋಡುತ್ತಿದ್ದ ಕೆಂಗಣ್ಣಿನಿಂದ —

*　　　*　　　*

“ ....ಶ್ರೀಯುತರ ಶೈಲಿ ಮನೋಹರವಾಗಿದೆ. ಹನ್ನೆರಡನೇ ಅಧ್ಯಾಯದಲ್ಲಿ ನಾಯಕನು ಪಾದರಕ್ಷಾಪ್ರಯೋಗವಾದಮೇಲೆ ಅವನು ಅನುಭವಿಸಿದ ಸಂಕಟದ ವರ್ಣನೆ ಓದುವಾಗ ಸಾಕ್ಷಾತ್ ಕಾದಂಬರಿಕಾರನೇ ಹಾಗೆ ಸಂಕಟಪಟ್ಟಿರಬಹುದೆ? ಅನ್ನುವಂತೆ ಸಹಜವಾಗಿ ಚಿತ್ರಿಸಿದ್ದಾರೆ ....ನಾಯಕಿಯ ವರ್ಣನೆ ಇಲ್ಲದೆ ಇದ್ದಿದ್ದರೆ ಪುಸ್ತಕ ಕೊಳ್ಳಬಹುದಾಗಿತ್ತು........ಶ್ರೀಯುತರು ಮುಂದಾದರೂ ಹೀಗೆ ಮಾಡದೆ ಇರಲಿ! — ಶುಂಠಿ.

*　　　*　　　*

—ಹಲ್ಲು ಕಡಿದ ವಿಶ್ವನಾಥ. ಶುಂಠಿ – ಅವ ಶುದ್ಧ ಒಣಶುಂಠಿ, ಹಿಂಗೆ ಬರೆಯಬಹುದೆ? ಅದೇ ಶುಂಠಿಯ ಸ್ನೇಹಿತ ಬರೆದ ಕಾಗಮ್ಮನ ಪುರಾಣ ಅದ್ಭುತ ಕೃತಿ ಅಂತ ಹಲ್ಲುಗಿರಿದಿದ್ದನಲ್ಲಾ–ದ್ರೋಹ – ದ್ರೋಹ ನಿಷ್ಪಕ್ಷಪಾತವೆಲ್ಲಿಂದ ಬಂತು! ಅದನ್ನೂ ಬದಿಗಿಟ್ಟು ಮತ್ತೊಂದು ವಿಮರ್ಶೆ ಕೈಗೆತ್ತಿಕೊಂಡ. “ಅನುರೋಗಿ” ಅನ್ನುವ ಮೋಸಪತ್ರಿಕೆಯವರು ಅದನ್ನು ಪ್ರಿಂಟಿಸಿದ್ದರು.

*　　　*　　　*

" .. ....ವೃಥಾ ಕಥೆಯನ್ನವಲಂಬಿಸಿದ್ದಾರೆ ಚರ್ವಿತಚರ್ೂಣ – ಸಮಾಗಮ ಅನ್ನುವ ಪರಿಚ್ಛೇದಗಳನ್ನು ಚ್ಛೇದವಮಾಡಿದ್ದರೇ ಲೇಖಕರ ಮಸಿ ಉಳಿಯುತ್ತಿತ್ತಲ್ಲವೆ? ಪ್ರಿಂಟಕರ ಶ್ರಮ ಉಳಿಯುತ್ತಿರಲಿಲ್ಲವೆ? ಹಾಸ್ಯಪ್ರಸಂಗವೆಂದು ಉಲ್ಲೇಖಿಸಿರುವ 'ಈ ಪರಿಯ ಸೊಬಗು' ಎಂಬ ಭಾಗದಲ್ಲಿ ಓದುಗರಿಕೆ ಅಳು ಬರುತ್ತದೆ – ಅದೇ ನಾಯಕಿಗೆ ನಾಯಿಕೆಮ್ಮು ಬಂದು ಸತ್ತಾಗ ನಗು ಬರುತ್ತದೆ... ಒಟ್ಟಿನಲ್ಲಿ ಇದೊಂದು ಒದ್ದು ಬಿಡುವಂಥಾ ಪುಸ್ತಕ" —ಮೆಣಸು.

—ಕಡೆಯ ಸಾಲು ಮುದ್ರಾರಾಕ್ಷಸನದೇ ಎಂದು ವಿಶ್ವನಾಥ ನಿರ್ಧರಿಸಿದ್ದ. ಓದಿ ಬಿಡುವಂಥಾ ಎನ್ನುವುದರ ಬದಲು, ಒದ್ದು ಬಿಡುವಂಥಾ ಎಂದು ಇದೆ, ಎಂದು ಯಾರಾದರೂ ತಿಳಿಯುವಂಥದೇ ಎಂದು ಮನಸ್ಸು ತಿಳಿವಮಾಡಿಕೊಂಡ. ಆದರೂ ಆ ವಿಮರ್ಶೆ ತೆಗೆದು ಇಟ್ಟಾಗ ಅದರ ಕೆಳಗಿನ ವಿಮರ್ಶೆ ಮತ್ತೊಂದು ಪಾರ್ಶ್ವಕ್ಕೆ ತಲೆನೋವು ಎಳೆಯಿತು. ಅದು 'ಬೋಳಮಿತ್ರ'ದಲ್ಲಿ ಬಂದಿತ್ತು.

* * *

".... ಶ್ರೀ ವಿಶ್ವರ ಈ ಕಾದಂಬರಿ ಕೊಲಾತ್ಮಕವಾಗಿದೆ... ....ಒಂದರಿಂದ ನೂರು ಪುಟದವರೆಗೆ ಬರುವ ಕನಸಿನ ಪ್ರಸಂಗವನ್ನು ಮನೋವಿಶ್ಲೇಷಣ ಚಿತ್ರಣ ವೆಂದು ಲೇಖಕರೇ ಸ್ವಯಂ ಹೇಳಿಕೊಂಡಿದ್ದಾರೆ. ಆದರೆ ಅದನ್ನೋದಿದಾಗ ಅದು ಕೇವಲ ಮನೋವಿಶ್ಲೇಷ್ಮ – ಅಂದರೆ ಶ್ಲೇಷ್ಮಭರಿತ ಮನಸ್ಸಿನಲ್ಲಿ ಚೆಲ್ಲಿದ ಮಸಿ ಎಂದು ಧಾರಾಳವಾಗಿ ಹೇಳಬಹುದು. "ನಿಶ್ಶಾವಡಂಬರ – ಮನೋದ್ಧಿಕ್ಕಾರಿ ಹಸ್ತನೇತ್ರ, ರಕ್ತ ದಿಗಂತ ವಿಚಾರಧಾರೆಯಲ್ಲಿ ನಾಯಕಿ ನಡೆದಳು" ಎಂದರೆ ಏನೆಂದು ಲೇಖಕರೇ ಟಿಪ್ಪಣಿಯಲ್ಲಿ ತಿಳಿಸದೆ ಇರುವುದರಿಂದ ಅವರಿಗೂ ಈ ನವ್ಯಪ್ರಯೋಗದ ಅರ್ಥ ಗೊತ್ತಿಲ್ಲವೆಂದು ತಿಳಿಯಬಹುದು.... . ಒಟ್ಟಿನಲ್ಲಿ ಈ ಕಾದಂಬರಿ ಬರೆಯುವ ಅಗತ್ಯ ವೇನಿತ್ತು?....ಒಡಲುರಿಗೆ ಓದುಗರು ಹೊಣೆಯಾಗಬೇಕೆ? — ಮೂನ್ನೂರು ಪುಟ ಬೆತ್ತಲೆ ಮೇಲುಹೊದಿಕೆಗೆ ಧಾರಾಳವಾಗಿ ಒಂದೂವರೆ ಕೊಡಬಹುದು, ಬೇರೆ ಯಾವ ರೀತಿಯಲ್ಲೂ ಖರ್ಚುಮಾಡುವ ದಾರಿ ಗೊತ್ತಿರದಿದ್ದರೆ. —ಲವಂಗ.

* * *

—-ಇನ್ನೊಂದು;

" .. ... ಶ್ರೀಯುತರ ಕೆಚ್ಚು ಮೆಚ್ಚುವಂಥಾದ್ದು. ಮಚ್ಚಿನಿಂದ ಕೊಚ್ಚಿಯಾರು ಎಂಬ ಹುಚ್ಚುತನವನ್ನೂ ಮೀರಿ ಧೈರ್ಯಮಾಡಿದ್ದಾರೆ....ನಾಯಕಿಯ ನಾಯಿ ಕೆಮ್ಮನ್ನೇ ಒಂದು ಪ್ರಕರಣಮಾಡುವ ಅವಶ್ಯಕತೆ ಇತ್ತೆ? ಒಂದು ಸಿದ್ಧಾಂತ ಮಾತ್ರ ಇದರಿಂದ ವೇದ್ಯವಾಗುತ್ತದೆ – ಲೇಖಕರೇ ಈ ನಾಯಿಕೆಮ್ಮಿನಿಂದ ಯಾಕೆ ಸಾಯ ಬಾರದಾಗಿತ್ತು – ಅದರಿಂದ ಈ ಕಾದಂಬರಿ ಓದುವ ನೂರಾರು ಜೀವ ಉಳಿಸಬಹು ದಿತ್ತಲ್ಲವೆ? ಈಗಲೂ ವೇಳೆ ಮೀರಿಲ್ಲ ಪ್ರಯತ್ನಿಸಬಾರದೇಕೆ? .... ತಿಣಿಕಿದನು

ಫಣಿರಾಯ ಎನ್ನುವಹಾಗೆ ವಿಶ್ವರು ಮುನ್ನೂರುಪುಟ ಮುಟ್ಟಬೇಕಾದರೆ ಧಾರಾಳವಾಗಿ ಚುಕ್ಕೆ – ಆಶ್ಚರ್ಯ – ಕಿರುವ್ಯಾರಾ – ಡ್ಯಾಷ್ ಡ್ಯಾಷ್ ಇತ್ಯಾದಿಗಳ ಮೊರೆಹೊಕ್ಕಿದ್ದಾರೆ. ತಲೆನೋವಿನ ಮಾತ್ರೆಗಳ ಕಂಪೆನಿಯವರು ಹೇಳಿ ಇದನ್ನು ಬರೆಸಿರಬಹುದೆ? ಎಂಬ ಶಂಕೆ ಸಹಜವಾಗಿ ಬರುತ್ತದೆ. ಶ್ರೀಯುತರ ಶೈಲಿ ತಸ್ಕರೋಪಾಯವನ್ನವಲಂಬಿಸಿದೆ. ಒಟ್ಟನಲ್ಲಿ ಇದೊಂದು – ಕಾದಂಬರಿಯೋ ಕೊಸಂಬರಿಯಲ್ಲಿನ ಮೆಣಸಿನ ಕಾಯೋ ಅರ್ಥವಾಗದಂತೆ ಸಮಸ್ಯಾತ್ಮಕವಾಗಿ ಗೀಚಿದ್ದಾರೆ – ಇವರಿಗೆ ದೇವರೇ ಸರಿಯಾಗಿ ನೋಡಿಕೊಳ್ಳಲಿ.........ನಮಗೇನು! —ಚೇಳಿನ್ಕೊಂಡಿ.

* * *

—ತಲೆ ಸಿಡಿಯಿತು. ಶೂಲೆ ನೆತ್ತಿಯಲ್ಲಿ ಪಸರಿಸಿತು. ಶುಂಠಿ – ಲವಂಗ ಮೆಣಸು – ಸೇರಿಸಿ ಅರೆದು ಕುಡಿಸಿ – ಚೇಳು ಕುಟಕಿದಂತಾಯ್ತು ವಿಶ್ವವಿಗೆ. ಆದರೆ ತನ್ನ ಬಾಲಸ್ನೇಹಿತನ ಪತ್ರಿಕೆ "ಯಜ್ಞಕುಂಡ"ದಲ್ಲಿ ಬಂದ ವಿಮರ್ಶೆ ಮಾತ್ರ ಇವನ ಉರಿವ ಒಡಲಿಗೆ ತುಪ್ಪ ಸುರುವಿದಂತಾಯಿತು. ಓದಿದ—

* * *

"........ಶ್ರೀಯುತರನ್ನು ಇಲ್ಲಿನತನಕ ಬಿಟ್ಟಿದ್ದು ಕನ್ನಡಿಗರ ಜವಾಬ್ದಾರಿ. ನಾವೇ ಮಾಡಿದ್ದು – ನಾವೇ ಅನುಭವಿಸಬೇಕು. ಆದರೆ ವಿಶ್ವ ಇವರ ತಂದೆತಾಯಿಗಳು ಇವನನ್ನು ಶಾಲೆಗೇಕೆ ಕಳಿಸಿದರು. ಅದರಿಂದಲೇ ನಾವು ಈ ತಲೆಶೂಲೆ ಅನುಭವಿಸಬೇಕಾಯ್ತು ಎಂಬ ಪ್ರಶ್ನೆ ಬರುತ್ತದೆ....... ಆದರೂ ಈಗಲೂ ನಾವು ಎಚ್ಚತ್ತು ನಮ್ಮ ಹಿತದೃಷ್ಟಿಯಿಂದ ಇವನನ್ನು ಹಿಡಿದು ಕಣ್ಣುಕಟ್ಟಿ ಕಾಡಿಗಟ್ಟಬೇಕು...." —ತ್ರಿಶಂಕು.

* * *

ಒಂಟಿ ಕಾಗೆಯಂತೆ ಕಾನನಕ್ಕೆ ತೆರಳಿದ ವಿಶ್ವಸಾಹಿತಿ.

— ಯಜ್ಞಪಶು.

ಜಮಾ-ಖರ್ಚು

ನಾನು ಕೊಟ್ಟ ಎಂಟಾಣೆಗಳೆಲ್ಲವು
ಬಂದರೆ ಸಾವಿರ ರೂಪಾಯಿ
ನನಗೆಕೊಟ್ಟ ಎಂಟಾಣೆಗಳೆಲ್ಲವು
ಹೋದರೆ ಸಾವಿರ ರೂಪಾಯಿ.

ಆದುದರಿಂ ಡಬಲೆಂಟ್ರಿಯ ಲೆಕ್ಕದ
ಲಯಬಿಲಿಟಿಗಳು ಅಸೆಟ್ಟುಗಳು
ಈಕ್ವ ಲೈಸಿದವು ಎಂದಿನಂತೆಯೇ
ನಾನಾಗಿರುವೆನು ಪಾಪರ್

—ಅ. ರಾ. ಸೇ.

ಹಾರುವ ತಟ್ಟೆಯಿಂದ ಬಿದ್ದ ಪತ್ರ

ಮೊನ್ನೆ, ನಮ್ಮೂರಿನಮೇಲೆ 'ಹಾರುವತಟ್ಟೆ' ಕಾಣಿಸಿಕೊಂಡಾಗ, ನಮ್ಮವಳು ಹಿತ್ತಲಬಾಗಿಲು ತೆರೆದು, ಅಂಗಳದಲ್ಲಿ ನಿಂತು, 'ಅಯ್ಯೋ' ಎಂದು ಕಿರಿಚಿದಳು. ಅದರ ವೇಗ ರಭಸ ಆರ್ಭಟ ಹೊಳವು ಇವೆಲ್ಲವೂ ಅವಳನ್ನು ದಿಗ್ಭ್ರಾಂತಳಾಗಿ ಮಾಡಿತು. ಆ ತಟ್ಟೆಯಮೇಲೆ ಕೂತಿದ್ದ ಅಂಗಾರಕನಿಗೂ ಅವಳ ಧ್ವನಿ ಕೇಳಿ, ಭಯವಾಯಿತೆಂದು ತೋರುತ್ತದೆ. ಅವನು (ಅವಳು?) ಅದರ ಮೇಲಿನ ಒಂದು ಕೈಚಕ್ರವನ್ನು ಗರಗರನೆ ತಿರುಗಿಸಿ, ವೇಗವನ್ನು ಥಟಕ್ಕನೆ ನೂರ್ಮಡಿಸಿ, ಈಶಾನ್ಯ ದಿಕ್ಕಿಂದ ಆಕಾಶವನ್ನೇರಿ ಪಲಾಯನಮಾಡಿದ.

ಆಗ, ಅವನ (ಅವಳ) ಕಿಸೆಯಲ್ಲಿದ್ದ ಒಂದು ಲಕ್ಕೋಟೆ ಕೆಳಕ್ಕೆಬಿತ್ತು. ಸತ್ತು ಬೀಳುವ ಹಕ್ಕಿಯಂತೆ, ಅದು ದುಢುಂ ಎಂದು ನನ್ನ ಪಾದತಲದಲ್ಲಿ ಬಿತ್ತು. "ಭೂವಲಯಶಾಸ್ತ್ರ"ದಲ್ಲಿ ಅಂಗಾರಕಭಾಷೆಯೂ ಪ್ರತಿಪಾದಿತವಾಗಿದೆಯಂತಲ್ಲಾ.... ಆದ್ದರಿಂದ, ನಾನು ಅದರೊಳಗಿದ್ದ ಒಂದು ಪತ್ರವನ್ನು ಇಕೊ, ಕನ್ನಡಿಸಿ ಕೊಟ್ಟಿದೇನೆ.

ದಯವಿಟ್ಟು ಓದೋಣವಾಗಲಿ. ಹಾರುವ ತಟ್ಟೆಗಳು ಜಗತ್ತಿನ ನಾನಾರಾಷ್ಟ್ರಗಳಮೇಲೆ ಈಚೆಗೆ ಹೆಚ್ಚು ಹೆಚ್ಚಾಗಿ ಹಾರಾಡುವುದರ ಗುಟ್ಟನ್ನು ತಿಳಿದುಕೊಳ್ಳೋಣವಾಗಲಿ:—

ಅಂಗರಕಾಧಿಪತ್ಯದ ಪ್ರಪ್ರಮುಖ ಸಚಿವೋತ್ತಮ ಮಂಡಲಿಯ ಮಹಾನಾಯಕರಿಗೆ, ದಾಸನ ವಿಜ್ಞಾಪನೆಗಳು. ನಾನು ೧೦೮ನೆಯ ನಂಬರ್ ವಿಮಾನಾರೂಢನಾಗಿ, ಕಳೆದ ಆರು ವತ್ಸರಗಳಿಂದಲೂ (ಅಂಗಾರಕ ಪಂಚಾಂಗ ರೀತ್ಯ ವತ್ಸರವೊಂದಕ್ಕೆ ಎಷ್ಟು ಮಾಸಗಳೋ, ತಿಳಿಯದು) ಭೂಗೋಳದ ಪರಿಸ್ಥಿತಿಯನ್ನು ಪರೀಕ್ಷಿಸುತ್ತಿದೇನಷ್ಟೆ. ಭೂಗೋಳದ ಮೂರನೆಯ ಎರಡನೆಯ ಭಾಗ ಉಪ್ಪುನೀರಿಂದ ಆವರಿಸಲ್ಪಟ್ಟಿದೆಯಾದ್ದರಿಂದ, ನಮ್ಮಲ್ಲಿರುವ ಲಾವಣ್ಯವತಿಯರನ್ನು (ಲವಣ ಲಾವಣ್ಯ–ಲಾವಣ್ಯವತಿ) ಅಲ್ಲಿಗೆ ರವಾನಿಸಬಹುದೆಂದು ನನಗೆ ತೋರುತ್ತದೆ. (ಅವರು ಎಂದು, ಎಲ್ಲಿಗೆ, ಎಷ್ಟು ಸಂಖ್ಯೆಯಲ್ಲಿ, ಬಂದಿಳಿಯುತ್ತಾರೋ? ನೋಡಬೇಕು, ಬಂದಮೇಲೆ, ಹೇಗಿರುತ್ತಾರೋ, ಏನೊ?) ಉಳಿದ ಮೂರನೆಯ ಒಂದುಭಾಗದಲ್ಲಿ ಹೆಚ್ಚಾಗಿ ಬೆಟ್ಟಗುಡ್ಡಗಳೂ ಅರಣ್ಯಗಳೂ ಮರುಳುಗಾಡುಗಳೂ ಇರುವುದರಿಂದ, ಪೂರ್ವ ಅಂಗಾರಕ ದೇಶಗಳಿಂದ ಕ್ರೂರಮೃಗಗಳನ್ನು ನಾವು ಈ ಗೋಳಕ್ಕೆ ಸಾಗಿಸಿ ಸುರಕ್ಷಿತವಾಗಿ ಬಾಳ

ಬಹುದು. (ಕ್ರೂರಮೃಗಗಳು ಎಂದು ಇಲ್ಲಿ ನಮೂದಿಸಲಾಗಿರುವ ಪ್ರಾಣಿಗಳು ಯಾವುವು? ಗ್ರಹದ ಕಮ್ಯೂನಿಸ್ಟರೋ? ಬಂಡವಾಳಗಾರರೋ? ಅಥವಾ ಕರೀ ಮನುಷ್ಯರೋ? ಕೆಂಪು ಕೋತಿಗಳೋ? ಬಲ್ಲವರಾರು?) ಬಯಲುಸೀಮೆಗಳಲ್ಲಿ, ನರ ಮನುಷ್ಯರು ಎಂದೆನಿಸಿಕೊಳ್ಳುವ ಒಂದು ಬಗೆಯ ಪ್ರಾಣಿಗಳು ನೆಲದಮೇಲೆಯೇ ಗೂಡುಕಟ್ಟಿಕೊಂಡು ವಾಸಮಾಡುತ್ತಿವೆ. ಈ ಪ್ರಾಣಿಗಳು ಪರಸ್ಪರ ದ್ವೇಷಾನುವರ್ತಿ ಗಳಾಗಿ ಸದಾ ಒಬ್ಬರಿಗೊಬ್ಬರು ಜಗಳವಾಡುತ್ತಾ, ಅವಿಶ್ವಾಸ ಪ್ರಕಟಿಸುತ್ತಾ, ಒದ್ದಾಡುತ್ತಿವೆ. ಬಗೆಬಗೆಯ ಕ್ರಿಮಿಕೀಟಗಳು ಅವುಗಳ ರಕ್ತದೊಳಕ್ಕೆ ಸೇರಿ, ಈ ಪ್ರಾಣಿಗಳನ್ನು ನಾಶಮಾಡುತ್ತಿವೆ. ಆದರೆ, ಇದಕ್ಕಿಂತ ಹೆಚ್ಚಾಗಿ, ಅವೇ ಗುಂಪುಕಟ್ಟಿಕೊಂಡು, ಕೂಗಾಡುತ್ತಾ, ಪರಸ್ಪರ ಮೇಲೆ ಬಿದ್ದು, ಆಗಿಂದಾಗ್ಗೆ ಸತ್ತು ಬೀಳುತ್ತವೆ ಇದು ಆಶ್ಚರ್ಯವೇ ಸರಿ. ಇತ್ತೀಚೆಗೆ, ನಮ್ಮ ಅಂಗಾರಕಾಧಿಪತ್ಯದ ಪಂಡಿತರು ಗಮನಿಸಿದ ಪ್ರಕ್ಷೋಭಗಳಿಗೆ, ಈ ಗುಂಪುಗಳ ವಿಪರೀತವಾದ ವಿನಾಶ ಕಾರೀ ಉತ್ಸಾಹವೇ ಕಾರಣ. ಇಡೀ ನರಮನುಷ್ಯ ಸಮೂಹವನ್ನೇ ನಾಶಮಾಡ ಬೇಕೆಂಬ ದುರ್ಬುದ್ಧಿಯಿಂದ ಅವರು ಒಂದು ಹೊಸ ಬಗೆಯ ಪ್ರಯೋಗವನ್ನು ಪರೀಕ್ಷಿಸಿದುವು. ಈ ಪ್ರಯೋಗ ಫಲಿಸಿದನಂತರ, ಅಂಗಾರಕ ಮಹಾನಾಯಕರು ಅಲ್ಲಿಗೆ ಚಿತ್ತೈಸಿ, ಭೂಗೋಳವನ್ನು ನಮ್ಮ ಸಂಪದಭಿವೃದ್ಧಿಗೆ ಹೇಗೆ ಅಳವಡಿಸಿಕೊಳ್ಳ ಬೇಕೆಂದು ಯೋಚಿಸಿ ನಿರ್ಧರಿಸಬಹುದಾಗಿದೆ. ನಾಲ್ಕು ನರಮನುಷ್ಯರು ಒಟ್ಟು ಸೇರಿದರೆ, ಅವರು ನಾಲ್ಕು ಭಾಷೆಗಳನ್ನಾಡುತ್ತಾರೆ; ನಾಲ್ಕು ಅವಿಶ್ವಾಸ ನಿರ್ಣಯ ಗಳನ್ನು ತಂದೊಡ್ಡಿ ಯದ್ವಾತದ್ವಾ ಬೈದಾಡುತ್ತಾರೆ. ನಮ್ಮ ಪ್ರಯತ್ನ ಜಯಪ್ರದ ವಾಗುತ್ತದೆ, ಎಂಬುದಕ್ಕೆ ಇದೊಂದು ಶುಭ ಚಿಹ್ನೆ. ಇಂತಹ ಚಿಹ್ನೆಗಳು, ಈ ದಿನ ನಾನು ಭೇಟಿ ಇತ್ತ ಕರ್ಣಾಟಕ ಜನಸ್ತೋಮದಲ್ಲೂ ಕಾಣುತ್ತಿದೆ ಎಂದು ತಿಳಿಸಲು ಸಂತೋಷವಾಗುತ್ತದೆ. ಇತಿ ದಾಸಾನುದಾಸ ದ್ರಾಂ ದ್ರೋಂ ದ್ರೀಂ".

— ರೇವಣ್ಣ.

ಯಾಕ್ ಚಿಂತೆ?


"ನಾಳೀಗ್ ಬರೋ ದುಕ್ಕಾನ
ನಿಲ್ಸ್‌ತೈತೇನ್ ನಿನ್ ಚಿಂತೆ?
ಇವೊತ್ತ್‌ಗಿರೋ ಸಕ್ತೀನ
ಕರಗೀಸ್ತೈತೋ ಚಿಂತೆ!"

ನಾಳಿನ್ ಕಸ್ಟಾನ ಮೆಲುಕಾಕ್ತ
ನಡಗೋದ್ಯಾತಕ್ ಮಂಕೆ—
ಯಾಕ್ ಚಿಂತೀ ಮಾಡ್ತೀಯ
ನೆಗ್ತಿಬರ್ದ್ ಸುಂಕೆ!

— ಅಳಿಗಮಾರ,

“ಅನ್ಯಾಯ ಮಸ್ ಅರ್ಜಿ”

ದವಾಲಿ ಧೊಂಡೋಜೀಗೆ ಆಶ್ಚರ್ಯ! ಬೆಳಗಾಗಿಂದ ಸಂಜೆಯತನಕ ಬಾಗಿಲ ಹೊರಗಿನ ಸ್ಟೂಲಿನಮೇಲೆ ಕುಂತಾ ಅಂದರೆ ತೀರಿತು ಕೆಲಸ. ಬಂದ ನರಪಿಳ್ಳೆಯಾದರೂ ವಾನರಪಿಳ್ಳೆಯಾದರೂ ಇವನಿಗೆ ಸಲಾಂ ಹಾಕೇ ಅಡ್ಡಬಾಗಿಲ ದಾಟಬೇಕು. ನಿಯಮ ಹೀಗಿದ್ದಾಗ, ವಾಡಿಕೆ ತಪ್ಪದೆ ಇದ್ದಾಗ ಈ ದಿನ ಯಾವ ಮಾಯದಲ್ಲೋ ಯಾರೋ ಹೆಂಗಸರು ಸಾಹೇಬರ ಕೊಠಡಿಗೆ ಹೋಗಿ ಮಾತಾಡುತ್ತಿದ್ದಾರಲ್ಲ! ಸ್ಟೂಲಿನಮೇಲೆ ಕೂತ್ಹಂಗೇ ಸ್ವಲ್ಪ ಝೊಂಪು ಬಂದಿದ್ದಿರಬಹುದು, ಹಂಗೂ ಈ ಕುಂಭಕರ್ಣ ನಿದ್ರೆ ಬಂದಿತ್ತಾ ಎಂದೇ ಆಶ್ಚರ್ಯ!



ಸಾಹೇಬರು ಧೊಂಡೋಜೀಗೆ ಆ ವರ್ಷ ಭಡ್ತಿ ಕೊಡಿಸಲಾಗಲಿಲ್ಲ. ನಿಖರವಾದ ಕೆಲಸವಿಲ್ಲದ ಕಾರ್ಮಿಕನಿಗೆ ಭಡ್ತಿ ಕೊಡಿಸೋದು ಅಸಾಧ್ಯವಾಗಿತ್ತು. ಕಾರಣ

ಘೊಂಡೋಜೀಗೆ ಸಾಹೇಬರಮೇಲೆ ಸ್ವಲ್ಪ ರೇಗು, ಈ ದೃಶ್ಯ ಕಂಡು ಒಂದು ಅನ್ಯಾಯ ಮಸ್ ಅರ್ಜಿ ಗುಜರಾಯಿಸಿದ. ಇಂತಹಾ ದಿವಸ ಇಂತಹ ಹೊತ್ತಿನಲ್ಲಿ ಈ ಸಾಹೇಬರ ಸರ್ಕಾರಿ ಕೊಠಡಿಯಲ್ಲಿ ಒಂದು ಹೆಣ್ಣು ಹೆಂಗಸು ಬಂದು ಮಾತಾಡು ತ್ತಿತ್ತು. ಮಿಕ್ಕ ಪರಿಣಾಮ ಆಡಿದವರ ಬಾಯಲ್ಲಿ, ಘನಸರ್ಕಾರ ಇದನ್ನು ವಿಚಾರಿಸಿ ಸರಿಯಾದ ಶಿಕ್ಷೆ ವಿಧಿಸಲೇಬೇಕು ಇತ್ಯಾದಿ ಇತ್ಯಾದಿ.

ಅರ್ಜಿ ಕೇಂದ್ರ ಕಛೇರಿಗೆ ಹೋಯ್ತು. ಅಲ್ಲಿಂದ ಎರಡುತಿಂಗಳಾದಮೇಲೆ ಡೈರೆಕ್ಟರ್ ಕಛೇರಿಗೆ ತಲಾಷಿಗೆ ಬಂತು. ಅಲ್ಲಿಂದ ಸಾಹೇಬರ ಹತ್ತಿರಕ್ಕೆ ಇನ್ನೆರಡು ತಿಂಗಳಮೇಲೆ ಬಂತು. ಅವರು ಅಂದರು 'ಆ ದಿನ ಸಂಜೆ ಯಾರುಬಂದಿದ್ದರೋ ನನಗೆ ಗೊತ್ತಿಲ್ಲ. ಹೋಗಿ ಬಂದವರ ಡೈರಿ ನಾನು ಬರೆದಿಡುವಂತೆ ಆರ್ಡರಿಲ್ಲ' ಎಂದು. ಇದೆಲ್ಲಾ ಇನ್ನೆರಡು ತಿಂಗಳಮೇಲೆ ಸೆಕ್ರಿಟೇರಿಯಟಿಗೇ ಹೋಯ್ತು. ಅಲ್ಲಿಂದ ಆ ಇಲಾಖಾ ಸೆಕ್ರಿಟರಿಗಳು ಇದರಿಂದ ಹಣದಮಾರ್ಪಾಡು ಏನಾಗ ಬಹುದು ಎಂದು ತಿಳಿಯಲು ಆರ್ಥಿಕ ಸೆಕ್ರೆಟರಿಗಳಿಗೆ ಕಳಿಸಿದರು ಆರ್ಥಿಕ ಸೆಕ್ರೆಟರಿ ಗಳು–ಸಾಹೇಬ–ಬಂದಾಕೆ–ಇವರ ಮರ್ಜಿಯಮೇಲೆ ಆರ್ಥಿಕ ಪ್ರಗತಿ ಎಂದು ಮುಗುಮ್ಮಾಗಿ ಮುಗಳ್ನಗೆ ಬೀರುತ್ತಾ ಬರೆದು, ಎರಡು ತಿಂಗಳಮೇಲೆ ಕಳಿಸಿದರು. ನಂತರ ವ್ಯವಸಾಯ ಸೆಕ್ರೆಟರಿಗಳಿಗೆ ಈ ಫೈಲು ಹೋಯ್ತು. ಅವರು ಎರಡು ತಿಂಗಳ ತರುವಾಯ "ಮಳೆಬೀಳದಿದ್ದರೆ ಬೆಳೆಯೇ ಇಲ್ಲ" ಎಂದು ಟೀಕಿಸಿ ಹಿಂತಿರುಗಿ ಸಿದರು.

ನಂತರ ಇಲಾಖಾ ಸಚಿವರ ಹತ್ತಿರ ಹೋಯ್ತು. ಸಚಿವರು ಕಣ್ಣು ಕಣ್ಣು ಬಿಟ್ಟರು. ಅಲ್ಲಿ ನಮೂದಿಸಿದ ತಾರೀಖೇ ಆಕೆ ವಿಲಾಯ್ತಿಗೆ ಸಚಿವರ ಸಮ್ಮೇಳನಕ್ಕೆ ಹೋಗಿದ್ದು. ಹೊರಡುವ ಮುನ್ನ ತಮ್ಮ ಮುದ್ದುನಾಯನ್ನು ತಮ್ಮನಾದ ಈ ಸಾಹೇಬನಿಗೆ ವಹಿಸಿಕೊಡಲು ಅವನ ಕಛೇರಿಗೆ ಸಂಜೆ ತಾವು ಹೋಗಿದ್ದುದು ಜ್ಞಾಪ ಕಕ್ಕೆ ಬಂತು. ಅಡ್ಡಬಾಗಿಲ ಬಳಿಯಲ್ಲಿದ್ದ ಜವಾನ ಗೊರಕೆಹೊಯ್ಯುತ್ತಾ ನಿದ್ರೆ ಮಾಡುತ್ತಿದ್ದುದೂ ನೆನಪಿಗೆ ಬಂತು ಎಲಾ! ಈ ಖಳರೂಪಿ ಜವಾನನದೇ ಇರ ಬೇಕು ಈ ಮೂಗರ್ಜಿ–ಈ ಅನ್ಯಾಯ ಮಸ್ ಅರ್ಜಿ-ಎಂದು ಅವನನ್ನು ಭರ್ತರ್ಫ್ ಮಾಡುವ ಆಜ್ಞೆಯನ್ನಿತ್ತಳು ಆ ಸಚಿವಮಣಿ.

ಆ ಭರ್ತರ್ಫ್ ಆರ್ಡರ್ ಬರುವವೇಳೆಗೆ ದವಾಲಿಯವರೆಲ್ಲರೂ ಮುಷ್ಕರ ಹೂಡಿದ್ದರು. ಅಂದಮೇಲೆ ಭರ್ತರ್ಫ್ ಆಜ್ಞೆ ಅಲ್ಲೇನಿಂತಿತು. ಅಲ್ಲೇ ಸೆಕ್ರಿಟೇರಿ ಯಟ್ಟಿನಲ್ಲೇ ಸಮಾಧಿಯನ್ನು ಹೊಂದಿತು.

––ಈಗ ಎಲ್ಲಾ ಸುಖವಾಗಿದ್ದಾರೆ.

—ಕುಮಾರ್.

ಕೊರವಂಜಿ

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತ ವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪು ನೆಪ್ಪುಗಳು ಕಡಿಮೆಯಾಗುವುವು. ಒಪ್ಪಿದ ಲೇಖನಗಳಿಗೆ ಪ್ರತ್ಯುತ್ತರ ಉಂಟು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ಬಳೇಪೇಟೆ, ಬೆಂಗಳೂರು ೨

ವಾರ್ಷಿಕ ಚಂದಾ ಅಂಚೆ ಮೂಲಕ ರೂ ೩—೦—೦
ಬಿಡಿ ಪ್ರತಿ ಕೇವಲ ಆಣೆ ೦ ೪—೦

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೆ ನಮಗೆ ತಿಳಿಸಿದರೆ ಬಹಳ ಸಹಾಯ ಮಾಡಿದಂತಾಗುವುದು.



ಸಹಾಯಕ ನಟವರ್ಗದಲ್ಲಿ:

ಕಾರ್ತಿಕ್ — ಎಂ. ಎಸ್. ಕೃಷ್ಣನ್ — ಟಿ. ಎ. ಮಧುರಂ — ಪೊನ್‌ವಯಲ್ ಸುಶೀಲ.


ದಕ್ಷಿಣ ಭಾರತದಲ್ಲಿ ಮನಮೋಹಕ ಗೇವಾಕಲರ್ ನೃತ್ಯದೃಶ್ಯವನ್ನುಳ್ಳ ಏಕತ್ರಿಕ ಕನ್ನಡ ಚಿತ್ರ.

For Particulars contact:

RAGHAVENDRA PICTURES,
GANDHINAGAR, : : BANGALORE 2.

REG No. M. 4718 KORAVANJI, JANUARY 1955

ಅತ್ಯುನ್ನತವಾದ, ದೀರ್ಘಕಾಲ ಬಾಳಿಕೆ ಬರುವ




(ಮಡಿಸುವ ಕುರ್ಚಿ)

ಕಿರ್ಲೋಸ್ಕರ್

ಫರ್ನಿಚರ್‌ಗಳು

★

- ★ ಸ್ಟೀಲ್ ಟ್ಯೂಬ್ ಕುರ್ಚಿಗಳು
- ★ ಸ್ಟೀಲ್ ಟ್ಯೂಬ್ ಮಂಚಗಳು
- ★ ಸ್ಟೀಲ್ ಟ್ಯೂಬ್ ತೊಟ್ಟಿಲುಗಳು



(ಮಡಿಸುವ ಮಂಚ)

ಪ್ರತಿಯೊಂದು ಮನೆಯ ಸೌಂದರ್ಯವನ್ನೂ ಬೆಳಗುತ್ತವೆ.

★

ಕಿರ್ಲೋಸ್ಕರ್ ಬ್ರದರ್ಸ್ ಲಿ.,

ಶ್ರೀ ನರಸಿಂಹರಾಜ ರಸ್ತೆ,

ಪೋಸ್ಟ್ ಬಾಕ್ಸ್ ೬೦೭ : : ಬೆಂಗಳೂರು ೨

Printed by B. S Iyengar, Bangalore City
Publisher—B. N. Gupta. Editor—M. Sivaram